ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 26 ಜುಲೈ 4, 1982 ಬೆಲೆ 60 ಪೈಸೆ

ಭಾಷಾ ಧೋರಣೆ ಬಗ್ಗೆ ಪಾಲಿಟ್‌ಬ್ಯೂರೋ ಟೀಕೆ

ಎಲ್ಲಾ ರೀತಿಯ ಪ್ರಜಾಪ್ರಭುತ್ವ ನಿಯಮಗಳಿಗೆ ವಿರೋಧವಾದ ಭಾಷಾ ಧೋರಣೆಯನ್ನು ಕರ್ನಾಟಕ ರಾಜ್ಯದ ಸರಕಾರ ಮತ್ತು ಶಾಸಕಾಂಗಗಳು ಒಪ್ಪಿಕೊಂಡಿರುವುದರ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ. ಕನ್ನಡವನ್ನು ಭಾಷಾ ಅಲ್ಪ ಸಂಖ್ಯಾತರ ಮೇಲೆ ಕಡ್ಡಾಯವಾಗಿ ಹೇರಬೇಕೆನ್ನುವ ಸಂಕುಚಿತವಾದಿ ಬೇಡಿಕೆಗೆ ಸರಕಾರ ಬಲಿಬಿದ್ದಿದೆ ಮತ್ತು ಇದೇ ಸಂದರ್ಭ ಇಂಗ್ಲೀಷ್ ಭಾಷೆಯನ್ನು ಅದಕ್ಕಿರುವ ಅಗ್ರಗಣ್ಯ ಸ್ಥಾನದಲ್ಲೇ ಮುಂದುವರಿಸಲಾಗಿದೆ.

ಸ್ವಾತಂತ್ರ್ಯಾನಂತರ ರಾಜ್ಯವನ್ನಾಳಿಕೊಂಡು ಬಂದಿರುವ ಸರಕಾರಗಳು ಸಂಸ್ಕೃತಕ್ಕೆ ಕನ್ನಡ ಭಾಷೆಗಿರುವುದಕ್ಕಿಂತಲೂ ಉನ್ನತ ಸ್ಥಾನ ದೊರೆಯುವಂತೆ ಮಾಡುತ್ತಾ ಬಂದು, ಭಾಷಾ ಧೋರಣೆಯನ್ನು ಇನ್ನೂ ಗೊಂದಲಕ್ಕೀಡು ಮಾಡಿವೆ. ಕನ್ನಡ ಮಾತೃ ಭಾಷೆಯಾಗಿರುವ ವಿದ್ಯಾರ್ಥಿಗಳು ಕನ್ನಡವನ್ನು ಕಲಿಯದೆಯೆ ವಿದ್ಯಾರ್ಜನೆ ಮಾಡುವುದು ಸಾಧ್ಯವಾಗುವಂತಹ ರೀತಿಯಲ್ಲಿ ತ್ರಿಭಾಷಾಸೂತ್ರವನ್ನು ರಾಜ್ಯದಲ್ಲಿ ಜಾರಿ ಮಾಡಲಾಗಿತ್ತು.

ಈ ಪರಿಸ್ಥಿತಿಯು ಕನ್ನಡಿಗರನ್ನು ಹೊಡೆದೆಬ್ಬಿಸಿತು. ಮತ್ತು "ಕನ್ನಡವು ತನ್ನ ಅಗ್ರಗಣ್ಯ ಸ್ಥಾನವನ್ನು ಪಡೆಯುವಂತಾಗಬೇಕು" ಎಂದು ನ್ಯಾಯಯುತವಾಗಿಯೇ ಕೇಳುವಂತಾಯಿತು. ಆದರೆ ಈ ನ್ಯಾಯಯುತವಾದ ಬೇಡಿಕೆಗೆ ಅಲ್ಪ ಸಂಖ್ಯಾತ ಭಾಷೆಗಳ ವಿರೋಧವಾದ ಸಂಕುಚಿತ ಬೇಡಿಕೆಯ ರೂಪವನ್ನು ಕೆಲವು ಹಿತಾಸಕ್ತಿಗಳಿಂದ ಕೊಡಲಾಯಿತು. ಶೈಕ್ಷಣಿಕ ಕ್ಷೇತ್ರದಲ್ಲಿ ಸುಮಾರು 150 ವರ್ಷಗಳಿಂದಲೂ ಅಗ್ರಗಣ್ಯ ಸ್ಥಾನ ವಹಿಸಿಕೊಂಡು ಬಂದಿರುವ ಇಂಗ್ಲೀಷ್ ಭಾಷೆಯ ವಿರುದ್ಧ ತಮ್ಮ ಕ್ರೋಧವನ್ನು ತೋರಿಸುವುದಕ್ಕೆ ಬದಲು, ಜನತೆಯ ಸಿಟ್ಟನ್ನು ಅಲ್ಪ ಸಂಖ್ಯಾತರು ಮಾತನಾಡುವ ಸೋದರ ಭಾಷೆಗಳ ಮೇಲೆ ತೋರಿಸುವಂತೆ ಈ ಶಕ್ತಿಗಳು ಮಾಡಿವೆ ಎಂದು ಸಿ. ಪಿ. ಐ. (ಎಂ) ಪಾಲಿಟ್‌ಬ್ಯೂರೋ ಹೇಳಿದೆ.

ಇಂಗ್ಲೀಷ್ ಭಾಷೆಯನ್ನು ದೂರಮಾಡಿ, ಕನ್ನಡ ಭಾಷೆಯನ್ನು ಅಗ್ರಗಣ್ಯ ಸ್ಥಾನಕ್ಕೇರಿಸುವುದು ಮತ್ತು ಅದರೊಂದಿಗೆ ಅಲ್ಪ ಸಂಖ್ಯಾತ ಭಾಷೆಗಳಿಗೆ ರಕ್ಷಣೆ ಕೊಡುವಂತ ಧೋರಣೆಯನ್ನು ರಾಜ್ಯ ಸರಕಾರವು ಅನುಸರಿಸುವುದು ಉತ್ತಮ ಎಂದು ಪಾಲಿಟ್‌ಬ್ಯೂರೋ ಹೇಳಿದೆ. ಭಾಷಾ ಅಲ್ಪ ಸಂಖ್ಯಾತರುಗಳನ್ನು ಎದುರು ಹಾಕಿಕೊಳ್ಳುವ ಧೋರಣೆಯನ್ನು ಬಿಟ್ಟುಕೊಟ್ಟು, ಭಾಷೆಯ ಪ್ರಶ್ನೆಯನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಪರಿಹರಿಸಿಕೊಳ್ಳುವಂತೆ ರಾಜ್ಯ ಸರಕಾರವನ್ನು ಒತ್ತಾಯಿಸಲು ಎಲ್ಲಾ ಪಕ್ಷಗಳಿಗೂ, ಪ್ರಜಾಪ್ರಭುತ್ವ ಶಕ್ತಿಗಳಿಗೂ ಪಾಲಿಟ್‌ಬ್ಯೂರೋವು ಕರೆ ಈಯುತ್ತದೆ.

ಮೊರಿಷಸ್‌ನಲ್ಲಿ ಎಡರಂಗ ಅಧಿಕಾರಕ್ಕೆ

ಫಾಕ್ಲೆಂಡ್ ಮತ್ತು ಲೆಬನಾನ್‌ನಲ್ಲಿ ನಡೆಯುತ್ತಿದ್ದ ಯುದ್ಧಗಳು ಜನರ ಗಮನ ಸೆಳೆದಿದ್ದ ಸಮಯದಲ್ಲಿ ಹಿಂದೂ ಮಹಾಸಾಗರದ ಪುಟ್ಟ ದ್ವೀಪ ರಾಷ್ಟ್ರವಾದ ಮೊರಿಷಸ್‌ನಲ್ಲಿ ಜೂನ್ 11 ರಂದು ನಡೆದ ಚುನಾವಣೆಯಲ್ಲಿ ಎಡರಂಗ ಅಧಿಕಾರಕ್ಕೆ ಬಂದಿದೆ. ಪಾಶ್ಚಿಮಾತ್ಯ ರಾಷ್ಟ್ರಗಳ ಪರವಾಗಿದ್ದ, 14 ವರ್ಷಗಳ ಕಾಲ ಆಡಳಿತ ನಡೆಸಿದ್ದ ಸರ್ ಶಿವೂಸಾಗರ ರಾಮ್‌ಗುಲಾಮ್ ಅವರ ಪಕ್ಷವನ್ನು ಮೂಲೆಗುಂಪುಮಾಡಿ ಮಾರ್ಕ್ಸಿಸ್ಟ್ ಹಿನ್ನೆಲೆ ಹೊಂದಿರುವ ಎಂ. ಎಂ. ಎಂ (Mouvement Militant Mauricien)ಮತ್ತು ಪಿ. ಎಸ್. ಎಂ. (Parti Socialiste Mauricien) ಎಡರಂಗವು ಅಧಿಕಾರಕ್ಕೆ ಬಂದಿದೆ. ರಾಷ್ಟ್ರೀಯ ಅಸೆಂಬ್ಲಿಯ 62 ಸ್ಥಾನಗಳಲ್ಲಿ ಎಂ. ಎಂ. ಎಂ. ಮತ್ತು ಪಿ. ಎಸ್. ಎಂ. ಎಡರಂಗವು 60 ಸ್ಥಾನಗಳನ್ನು ಪಡೆದಿದೆ. 2 ಸ್ಥಾನಗಳನ್ನು ಎಡರಂಗ ಬೆಂಬಲಿತ ಆರ್. ಪಿ. ಓ. (Rodrigues People's Organisation) ಪಕ್ಷ ಪಡೆದಿದೆ.

ಶಿವೂಸಾಗರ ಅವರ ನ್ಯಾಷನಲ್ ಅಲೈಯನ್ಸ್ ಪಾರ್ಟಿ (ಎನ್.ಎ.ಪಿ.) ಯು ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಮತ್ತು ವರ್ಣಭೇದ ನೀತಿ ಅನುಸರಿಸುತ್ತಿರುವ ದಕ್ಷಿಣ ಆಫ್ರಿಕಾ ಮತ್ತು ಸಿ.ಐ.ಎ. ನಿಂದ ಅಪಾರ ಹಣ ಪಡೆದು ಚುನಾವಣೆ ಗೆಲ್ಲಲು ಪ್ರಯತ್ನಿಸಿದ್ದರೂ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಒಂದೇ ಒಂದು ಸ್ಥಾನವನ್ನು ಪಡೆಯಲೂ ಸಫಲವಾಗಿಲ್ಲ.

(ಪೂರ್ತಿ ವಿವರ ನಂತರ ಕೊಡಲಾಗುವುದು)

●

ತೆಲಂಗಾಣಾ ಹುತಾತ್ಮರಿಗೆ ಶ್ರದ್ಧಾಂಜಲಿ

36 ವರ್ಷಗಳ ಹಿಂದೆ ಭಾರತದ ಕ್ರಾಂತಿಕಾರಿ ಚಳುವಳಿಯ ಒಂದು ರೋಮಾಂಚಕಾರಿ ಅಧ್ಯಾಯ ಆರಂಭವಾಗಿತ್ತು. ಅದು ಜುಲೈ 4, 1946 ರಂದು ದೊಡ್ಡಿ ಕೊಮಾರಯ್ಯ ಅವರು ಹುತಾತ್ಮರಾಗುವುದರೊಂದಿಗೆ ಸಿಡಿದು 5 ವರ್ಷಗಳ ಕಾಲ ಅವಿರತವಾಗಿ ನಡೆದ ತೆಲಂಗಾಣಾ ರೈತರ ಸಶಸ್ತ್ರ ಹೋರಾಟ.

ಪಾಳೆಯಗಾರಿ ಭೂಮಾಲೀಕತ್ವದ ವಿರುದ್ಧ ನಡೆದ ಈ ಅಪ್ರತಿಮ ಹೋರಾಟದಲ್ಲಿ ಸಹಸ್ರಾರು ಜನ ಕೊಲ್ಲಲ್ಪಟ್ಟರು. ಹತ್ತಾರು ಸಾವಿರ ಜನರನ್ನು ಪೋಲಿಸ್ ಕ್ಯಾಂಪ್‌ಗಳಲ್ಲಿ ಚಿತ್ರಹಿಂಸೆಗೀಡು ಮಾಡಲಾಯಿತು. ಆರಂಭದಲ್ಲಿ ಹೈದರಾಬಾದ್ ನಿಜಾಮನ, ನಂತರ ಆದೇ ಸ್ವತಂತ್ರಗೊಂಡ ಭಾರತ ಸರಕಾರದ ಮಧ್ಯ ಪ್ರವೇಶದ ವಿರುದ್ಧ ತೆಲಂಗಾಣಾ ಪ್ರದೇಶದ ಜನತೆ ವಿರೋಧಿತ ಹೋರಾಟ ನಡೆಸಿತ್ತು.

ತೆಲಂಗಾಣಾ ಹೋರಾಟದ ಸಾವಿರಾರು ಹುತಾತ್ಮರ ಉಜ್ವಲ ಕ್ರಾಂತಿಕಾರಿ ಆದರ್ಶ ನಮಗೆಲ್ಲ ಸ್ಫೂರ್ತಿಯ ಚಿಲುಮೆಯಾಗಲಿ.

ಈ ಸಂದರ್ಭದಲ್ಲಿ ಆ ಮಹಾನ್ ಹೋರಾಟದಲ್ಲಿ ಸಾವನ್ನಪ್ಪಿದ ಸಹಸ್ರಾರು ಸಂಗಾತಿಗಳಿಗೆ ನಾವು ಶ್ರದ್ಧಾಂಜಲಿ ಸಲ್ಲಿಸುತ್ತೇವೆ. ○

ಆಂಧ್ರ ಪ್ರದೇಶ :

ಈ ಹೇಯ ಕೊಲೆಗಳು ನಿಲ್ಲಲಿ

ಕಳೆದ 30 ತಿಂಗಳ ಅವಧಿಯಲ್ಲಿ ಆಂಧ್ರದ ವರಂಗಲ್ ಜಿಲ್ಲೆಯಲ್ಲಿ 40 ಸಿ.ಪಿ.ಐ. (ಎಂ) ಕಾರ್ಯಕರ್ತರ ಮತ್ತು ಹಿತೈಷಿಗಳ ಹೇಯ ಕೊಲೆಗಳು ನಡೆದಿವೆ. ಪಕ್ಕದ ನಲಗೊಂಡು ಜಿಲ್ಲೆಯಲ್ಲೂ ಹೆಚ್ಚು ಕಡಿಮೆ ಇದೇ ಸ್ಥಿತಿ.

ಒಂದು ಸಮಯದಲ್ಲಿ ಈ ಪ್ರದೇಶಗಳು ತೆಲಂಗಾಣಾ ಸಶಸ್ತ್ರ ಹೋರಾಟದ ಭದ್ರ ನೆಲೆಗಳಾಗಿದ್ದವು. ಕಮ್ಯೂನಿಸ್ಟ್ ಚಳುವಳಿಯಲ್ಲಿ ವಿಭಜನೆ ಉಂಟಾದ ಮೇಲೆ ಸ್ವಲ್ಪ ಹಿಂಜರಿತ ಉಂಟಾಗಿದ್ದರೂ ಇತ್ತೀಚಿನ ದಿವಗಳಲ್ಲಿ ಕೃಷೀ ಕೂಲಿಕಾರರು ಮತ್ತಿತರ ಜನ ವಿಭಾಗಗಳು ತಮ್ಮನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ತೀವ್ರ ಹೋರಾಟ ನಡೆಸುತ್ತಿದ್ದಾರೆ. ಸಿ.ಪಿ ಐ. (ಎಂ) ಮತ್ತು ರೈತರ, ಕಾರ್ಮಿಕರ, ವಿದ್ಯಾರ್ಥಿ–ಯುವಕರ, ಮಹಿಳೆಯರ ಸಾಮೂಹಿಕ ಸಂಘಟನೆಗಳು ಈ ಹೋರಾಟದ ನೇತೃತ್ವ ವಹಿಸಿವೆ. ಕಳೆದ ಜೂನ್ 5 ಮತ್ತು 6 ರಂದು ಹೈದರಾಬಾದ್‌ನಲ್ಲಿ ನಡೆದ ಯಶಸ್ವೀ ಕೃಷೀ ಕೂಲಿಕಾರರ ಸಮ್ಮೇಳನ ಮತ್ತು ಜಾಥಾ ತೀವ್ರವಾಗುತ್ತಿರುವ ಹೋರಾಟಗಳ ಕೈಗನ್ನಡಿಯಾಗಿದೆ.

ಜಮೀನ್ದಾರರ ಕೈವಾರಿಯಾಗಿರುವ ಕಾಂಗ್ರೆಸ್ (ಐ) ಸರಕಾರಕ್ಕೆ ಈ ಹೋರಾಟಗಳಿಂದ ಸ್ವಾಭಾವಿಕವಾಗಿಯೇ ಬಿಸಿ ತಟ್ಟಿದೆ. ಜಮಿನ್ದಾರರು (ಇವರಲ್ಲಿ ಹೆಚ್ಚಿನಂಶ ಕಾಂಗ್ರೈ ಧುರೀಣರೇ), ಮತಿಭ್ರಮಣೆ ಹೊಂದಿ ಸಿ.ಪಿ.ಐ.(ಎಂ) ವಿರುದ್ಧ ದ್ವೇಷ ಕಾರುತ್ತಿರುವ ನಕ್ಸಲೀಯರು ಸಿ.ಪಿ.ಐ.(ಎಂ) ಕಾರ್ಯಕರ್ತರ ಮತ್ತು ಹಿತೈಷಿಗಳನ್ನು ಅಮಾನುಷವಾಗಿ ಕೊಲೆ ಮಾಡುತ್ತಿದ್ದಾರೆ. ಸಿ. ಪಿ. ಐ (ಎಂ) ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ, ಶಾಸನ ಸಭೆಯಲ್ಲಿ ಸಿ. ಪಿ. ಐ. (ಎಂ) ಗುಂಪಿನ ಮುಖಂಡ ಕಾಂ| ಎಂ. ಓಂಕಾರ್ ಅವರನ್ನು ಕೊಲ್ಲಲು ಮೂರು ಸಲ ಯತ್ನ ನಡೆದಿದೆ.

ಜೂನ್ 2 ರಂದು ಕಾಂಗ್ರೈನ ಸಶಸ್ತ್ರ ಗೂಂಡಾಗಳು ಕೃಷೀ ಕೂಲಿಕಾರರ ಸಮ್ಮೇಳನದ ಸಿದ್ಧತೆಯಲ್ಲಿ ತೊಡಗಿದ್ದ ನರಸುಪೇಟೆ ತಾಲ್ಲೂಕಿನ ಮೊಹಮ್ಮದ್ ಪುರಂ ಗ್ರಾಮದ ಕಾಂ| ಕುಮಾರ ಸ್ವಾಮಿ ಮತ್ತು ಕಾಂ| ಸಾಲಯ್ಯ ಇವರನ್ನು ಸ್ಫೋಟಕಗಳನ್ನು ಉಪಯೋಗಿಸಿ ಕೊಲೆ ಮಾಡಲಾಗಿದೆ. ಜೂನ್ 15 ರಂದು ಮತ್ತಿಬ್ಬರು ಸಂಗಾತಿಗಳನ್ನು ಗುಂಡು ಹೊಡೆದು ಕೊಲ್ಲಲಾಗಿದೆ.

ಅನೇಕ ಕಡೆ ಪೋಲಿಸರು ಕ್ಯಾಂಪ್ ಹೂಡಿದ್ದಾರೆ. ಜಮೀನ್ದಾರರ ಮನೆಗಳಲ್ಲಿ ಮೇಜವಾನಿ ಮಾಡುತ್ತಿದ್ದಾರೆ. ನಿರಪರಾಧಿಗಳನ್ನು ಎಳೆತಂದು ಚಿತ್ರಹಿಂಸೆ ಮಾಡಲಾಗುತ್ತಿದೆ. ಹಳ್ಳಿಗಳ

(8ನೇ ಪುಟ ನೋಡಿ)

ಮೈಸೂರು :

ವಿಕ್ರಾಂತ್ ಟೈರ್ಸ್ ಕಾರ್ಮಿಕರ ಸಂಘದ ವಾರ್ಷಿಕೋತ್ಸವ

ಮೈಸೂರಿನಲ್ಲಿರುವ ವಿಕ್ರಾಂತ್ ಟೈರ್ಸ್ ಕಾರ್ಮಿಕರ ಸಂಘದ ಮೊದಲ ನೆಯ ವಾರ್ಷಿಕೋತ್ಸವವನ್ನು 24-6-82 ರಂದು ಯಶಸ್ವಿಯಾಗಿ ಆಚರಿಸಲಾಯಿತು. ಮೈಸೂರಿನ ಪುರ ಭವನದಲ್ಲಿ ಕಿಕ್ಕಿರಿದು ತುಂಬಿದ ಕಾರ್ಮಿ ಕರ ಸಭೆಯ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಹೆಸರಾಂತ ವಕೀಲರೂ ಆದ ಶ್ರೀ ವಿ. ಎಚ್. ಗೌಡರು ವಹಿಸಿ ದ್ದರು.

ಸಿ.ಐ.ಟಿ.ಯು ರಾಜ್ಯ ಅಧ್ಯಕ್ಷರೂ, ವಿಕ್ರಾಂತ್ ಟೈರ್ಸ್ ಎಂಪ್ಲಾಯಿಸ್ ಯೂನಿಯನ್ ಸಲಹೆಗಾರರೂ ಆಗಿ ರುವ ಕಾಂ॥ ಸೂರ್ಯನಾರಾಯಣ ರಾವ್‌ರವರು ಮುಖ್ಯ ಅತಿಥಿಗಳಾಗಿ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದರು ಕಾಂ॥ ಸೂರಿಯ ವರ ಸಮರ್ಥ ನೇತೃತ್ವದಲ್ಲಿ ಇತ್ತೀಚೆಗೆ ವಿಕ್ರಾಂತ್ ಟೈರ್ಸ್ ಕಾರ್ಮಿಕರ ಸಂಘ ಮತ್ತು ಆಡಳಿತ ವರ್ಗದ ನಡುವೆ ಏರ್ಪಟ್ಟ ಒಪ್ಪಂದದಿಂದ ಸಂತೋಷ ಗೊಂಡ ಕಾರ್ಮಿಕರು ಕಾಂ। ಸೂರಿ ಯವರನ್ನು ಸನ್ಮಾನಿಸಲು ಈ ಸಂದರ್ಭ ವನ್ನು ಉಪಯೋಗಿಸಿಕೊಂಡರು. ವಿಕ್ರಾಂತ್ ಟೈರ್ಸ್ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ। ಡಿ. ಎ. ಜಿಲವೇಂದ್ರ ರವರು ಸಂಘದ ಪರವಾಗಿ 25,000 ರೂ. ಗಳ ಚೆಕ್ಕನ್ನು ಕಾಂ। ಸೂರಿ ಯವರಿಗೆ ನೀಡಿದರು. ಅಪಾರ ಸಂಖ್ಯೆ ಯಲ್ಲಿ ಹೂಹಾರಗಳನ್ನು ಕಾಂ। ಸೂರಿ ಯವರಿಗೆ ಹಾಕಿ ಕಾರ್ಮಿಕರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಸನ್ಮಾನಕ್ಕೆ ವಂದಿಸಿದ ಕಾಂ। ಸೂರ್ಯ ನಾರಾಯಣರಾವ್‌ರವರು ಮಾತನಾ ಡುತ್ತಾ, ಇದನ್ನು ವ್ಯಕ್ತಿಗೆ ಮಾಡಿದ ಕ್ಕಿಂತ ಸಿ. ಐ. ಟಿ. ಯು ಸಂಘಟನೆಗೆ ಮಾಡಿದ ಸನ್ಮಾನವೆಂದು ಭಾವಿಸುವು ದಾಗಿ ಹೇಳಿದರು. ಆದ್ದರಿಂದಲೇ ತಮಗೆ ನೀಡಲಾದ ಮೊಬಲಗನ್ನು ಸಿ. ಐ. ಟಿ. ಯು. ಗೆ ನೀಡುವುದಾಗಿ ಅವರು ಘೋಷಿಸಿದರು. ಕಾರ್ಮಿ ಕರು ರಾಜಕೀಯವಾಗಿ ಪ್ರಜ್ಞಾ ವಂತರಾಗಬೇಕೆಂದು ಹೇಳಿದ ಅವರು ಶ್ರಮಜೀವಿಗಳಾದ ರೈತ ಕಾರ್ಮಿಕ ವರ್ಗದ ಸರಕಾರ ಅಧಿಕಾರಕ್ಕೆ ಬಂದಾಗ ಮಾತ್ರ ಸುಲಿಗೆಗಾರರನ್ನು ಮಟ್ಟ ಹಾಕಿ ಸಮಸಮಾಜ ಕಟ್ಟಲು ಸಾಧ್ಯವೆಂದರು. ದೇಶದಲ್ಲಿ ಇಂದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಸರ್ವಾಧಿಕಾರಿ ಶಕ್ತಿಗಳಿಂದ ಬಂದೊದಗಿರುವ ಕುತ್ತನ್ನು ಪ್ರಸ್ತಾಪಿ ಸಿದ ಅವರು ದೇಶದಾದ್ಯಂತ ಇರುವ ಉಸಿರು ಬಿಗಿದಿಡುವ ವಾತಾವರಣವನ್ನು ನೆನಪಿಸಿದರು. ಬೆಲೆ ಏರಿಕೆ, ನಿರು ದ್ಯೋಗ, ಹಣದುಬ್ಬರ, ಕಾರ್ಮಿಕ ಹಕ್ಕುಗಳ ಮರ್ಧನ, ನ್ಯಾಯ ಕೇಳುವ ರೈತನಿಗೆ ಗುಂಡು, ಹೀಗೆ ಕಾಂಗ್ರೆಸ್(ಐ) ಜನವಿರೋಧಿ ಧೋರಣೆಗಳ ಪಟ್ಟಿಮಾಡಿ ವಿವರಿಸಿದರು. ಬಿರ್ಲನ ಕಾರ್ಖಾನೆಗಳಿ ಗಾಗಿ ನೀಲಗಿರಿ ಮರ ನೆಡುತ್ತಿರುವ ಸರಕಾರ ಕಾರ್ಮಿಕರ ಕನಿಷ್ಠ ಕೂಲಿ ಜಾರಿ ಮಾಡಲು ಸಿದ್ಧವಿಲ್ಲವೆಂದ ಅವರು ಇಂದಿರಾ ಗಾಂಧಿಯ "ಉತ್ಪಾದನಾ ವರ್ಷ"ದಲ್ಲಿ ಕಾರ್ಖಾನೆಗಳ ಬೀಗ ಮುದ್ರೆ ಅಧಿಕವಾಗಿದ್ದು ಕಾರ್ಮಿಕರು ಬೀದಿ ಪಾಲಾಗುವ ಸ್ಥಿತಿ ಬಂದೊದಗಿದೆ ಎಂದರು. ಮುಂಬೈನ ಹತ್ತಿ ಗಿರಣಿ ಕಾರ್ಮಿಕರು ಕಳೆದ ಆರೇಳು ತಿಂಗಳಿಂದ ಮುಷ್ಕರ ನಡೆಸುತ್ತಿದ್ದಾಗ್ಯು ಆ ಬಗ್ಗೆ ನಿರ್ಲಕ್ಷ್ಯವಹಿಸುತ್ತಿರುವ ಕಾಂಗ್ರೈ ಸರ ಕಾರವನ್ನು ತೀವ್ರವಾಗಿ ಖಂಡಿಸಿದರು. ಮೈಸೂರಿನ ಜಾವಾ ಕಾರ್ಖಾನೆಯ ಬೀಗ ಮುದ್ರೆಯನ್ನು ಕೂಡಲೇ ತೆಗೆಯು ವಂತೆ ಒತ್ತಾಯಿಸಿದ ಅವರು ಎಂದೂ ಕಾರ್ಮಿಕ ವರ್ಗ ಮಾಲೀಕ ವರ್ಗದ ಕ್ಷಮೆ ಕೇಳುವ ದಯಾನೀಯ ಸ್ಥಿತಿಗೆ ಇಳಿಯದು ಎಂದರು.

ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ವಿ. ಎಚ್. ಗೌಡರು ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ತೀವ್ರವಾಗಿ ಖಂಡಿಸಿದರು.

ವಾರ್ಷಿಕೋತ್ಸವದ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಕಾಂ। ಸೂರ್ಯನಾರಾಯಣರಾವ್ ಬಹು ಮಾನ ವಿತರಣೆ ಮಾಡಿದರು. ವಾರ್ಷಿ ಕೋತ್ಸವದ ನೆನಪಿಗಾಗಿ ವಿಕ್ರಾಂತ್ ಟೈರ್ಸ್‌ನಲ್ಲಿ ದುಡಿಯುತ್ತಿರುವ ಎಲ್ಲಾ 1500 ಕಾರ್ಮಿಕರಿಗೆ ಹಾಗು ಅವರು ಗಳ ಹಿತೈಷಿಗಳಿಗೆ ಊಟ, ತಿಂಡಿ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯ ಕ್ರಮದ ಮೊದಲಿಗೆ ವಿಕ್ರಾಂತ್ ಕಾರ್ಮಿಕ ಸಂಘದ ಪ್ರಧಾನ ಕಾರ್ಯ ದರ್ಶಿ ಕಾಂ। ಜಿ. ರಾಜೇಂದ್ರರವರು ಸರ್ವರನ್ನೂ ಸ್ವಾಗತಿಸಿ ಮಾತನಾಡಿ ದರು. ಕೊನೆಯಲ್ಲಿ ಸಹ ಕಾರ್ಯ ದರ್ಶಿ ಕಾಂ। ಕೃಷ್ಣರವರು ವಂದಿಸಿದರು. ಸಮಾರಂಭದ ಕೊನೆಯ ಅಂಗವಾಗಿ ಕಾರ್ಮಿಕರಿಂದ ವಿವಿಧವಿನೋದಾವಳಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ವರದಿ: ಕುಮಾರ್ ಕುಂದಾಪುರ



ಕಾರ್ಮಿಕರನ್ನುದ್ದೇಶಿಸಿ ಕಾಂ। ಸೂರಿಯವರು ಮಾತನಾಡುತ್ತಿರುವುದು. ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ವಿ. ಎಚ್. ಗೌಡ ಮತ್ತು ಪಕ್ಕದಲ್ಲಿರುವವರು ವಿಕ್ರಾಂತ್ ಟೈರ್ಸ್ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ। ಜಿ. ರಾಜೇಂದ್ರ.

ಜಂಟೀ ಸಮಾವೇಶದ ಕುರಿತು

ಪಾಲಿಟ್‌ಬ್ಯೂರೋ ಹೇಳಿಕೆ

ಕರ್ನಾಟಕದಲ್ಲಿ ನಡೆದ ಸಿ. ಪಿ. ಐ. ಮತ್ತು ಸಿ.ಪಿ.ಐ.(ಎಂ) ಜಂಟಿ ಸಮಾ ವೇಶವು ಬಂಡವಾಳಶಾಹಿ ಪತ್ರಿಕಾ ವಲಯದಲ್ಲಿ ಬಹಳಷ್ಟು ಗೊಂದಲ ಮತ್ತು ಊಹಾಪೋಹಗಳನ್ನುಂಟು ಮಾಡಿದೆ. ಈ ಸಮಾವೇಶವು ಎರಡೂ ಪಕ್ಷಗಳ ಒಗ್ಗಟ್ಟಿಗೆ ದಾರಿ ದೀಪವಾಗಿದೆ ಯೆಂಬ ಕೆಲವು ಸಿ.ಪಿ.ಐ. ಮುಖಂಡರ ಮತ್ತು ಅವರ ಪತ್ರಿಕೆಯ ಪ್ರಚಾರ ಮತ್ತಷ್ಟು ಗೊಂದಲ ಉಂಟುಮಾಡಿದೆ.

ಆದ್ದರಿಂದ ಪಾಲಿಟ್ ಬ್ಯೂರೋವು ಕರ್ನಾಟಕ ರಾಜ್ಯ ಸಮಿತಿಯ ಕಾರ್ಯ ದರ್ಶಿ ಮಂಡಳಿಯ ಸದಸ್ಯರನ್ನು ಪರಿಸ್ಥಿತಿಯ ವಿವರಣೆ ನೀಡಲು ಮತ್ತು ಈ ಗೊಂದಲಕ್ಕೆ ಸ್ಪಷ್ಟೀಕರಣ ನೀಡಲು ಆಹ್ವಾನಿಸಿತ್ತು.

ಬಂಡವಾಳಶಾಹಿ ಪತ್ರಿಕಾ ವಲಯ ಮತ್ತು ಸಿ.ಪಿ.ಐ. ಪತ್ರಿಕೆ(ನ್ಯೂ ಏಜ್) ಯು ಸಮಾವೇಶದ ಬಗ್ಗೆ ನೀಡಿದ ವಿವರಣೆಯ ಬಗ್ಗೆ ಕಾರ್ಯದರ್ಶಿ ಮಂಡಳಿ ಸದಸ್ಯರ ಗಮನ ಸೆಳೆಯಲಾ ಯಿತು. ಜಂಟಿ ಪ್ರಯತ್ನಗಳ ಮೂಲಕ ಸಾಮೂಹಿಕ ಚಳುವಳಿಗಳನ್ನು ಬೆಳೆಸ ಬೇಕೆಂಬ ತಮ್ಮ ಪ್ರಯತ್ನದ ದುರುಪ ಯೋಗ ಪಡೆದು ಎರಡೂ ಪಕ್ಷಗಳ ವಿಲೀನದ ಬಗ್ಗೆ ಭ್ರಮೆಗಳನ್ನು ಸೃಷ್ಟಿ ಸುವ ಪ್ರಚಾರದ ಬಗ್ಗೆ ಅವರು ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿದರು.

ಜನತೆಯ ಸಮಸ್ಯೆಗಳಿಗೆ ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿ ದಂತೆ ಎರಡೂ ಪಕ್ಷಗಳು ಜಂಟಿ ಹೋರಾಟಗಳನ್ನು ಬೆಳೆಸುವ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಇಚ್ಛೆಗೆ ಪಾಲಿಟ್ ಬ್ಯೂರೋ ಅನುಮೋದನೆ ನೀಡಿದೆ.

ಆದರೆ ಈ ಚಟುವಟಿಕೆಗಳನ್ನು ನಡೆಸಲು ಪಕ್ಷದ ಸದಸ್ಯರ ಜಂಟಿ ಸಮಾವೇಶಗಳು ಸರಿಯಾದ ವೇದಿಕೆ ಯಲ್ಲವೆಂದು ಪಾಲಿಟ್‌ಬ್ಯೂರೋ ಅಭಿ ಪ್ರಾಯಪಟ್ಟಿದೆ. ಈ ವೇದಿಕೆಯು ಪ್ರಸಕ್ತ ವಿಷಯಗಳು ಮಾತ್ರವಲ್ಲದೆ ಸೈದ್ಧಾಂತಿಕ ವಿಷಯಗಳಿಗೂ ಸಂಬಂಧಿ ಸಿದ ಗಂಭೀರ ಪ್ರಶ್ನೆಗಳ ಕುರಿತು ಎರಡೂ ಪಕ್ಷಗಳ ನಡುವೆ ಸಾಮಿಪ್ಯವಿದೆ ಎಂಬಂತಹ ಸತ್ಯಕ್ಕೆ ದೂರವಾದ ಕಲ್ಪನೆ ಯನ್ನು ಸೃಷ್ಟಿಸುತ್ತದೆ. ಜಂಟಿ ಸಮಾ ವೇಶವನ್ನು ಸ್ವಾಗತಿಸಿರುವ ಸಿ.ಪಿ.ಐ. ಮುಂದಾಳತ್ವದ ಅತ್ಯುತ್ಸಾಹದ ವರ್ಣನೆಯು ಸಾಮೂಹಿಕ ಐಕ್ಯ ಚಟು ವಟಿಕೆಗಳ ಬೆಳವಣಿಗೆಗೆ ಪ್ರತಿಕೂಲಕರ ವಾಗಿದೆ. ಮೂಲಭೂತ ವಿಚಾರಗಳ ಕುರಿತು ಇಲ್ಲದಿರುವ ಒಡಂಬಡಿಕೆಯನ್ನು ಇದೆ ಎಂದು ಹೇಳಿ ಇದೀಗ ಪ್ರಾರಂಭ ವಾಗಿರುವ ಸಂಯುಕ್ತ ಕಾರ್ಯಾಚ ರಣೆಯ ಸಮಾನ ತಿಳುವಳಿಕೆಯ ವಿಧಾನಕ್ಕೆ ಧಕ್ಕೆ ತರಬಾರದೆಂದು ಸಿ.ಪಿ.ಐ.(ಎಂ) ಇಷ್ಟಪಡುತ್ತದೆ.

ಇನ್ನು ಜಂಟಿ ಸಮಾವೇಶವು ಅಂಗೀ ಕರಿಸಿರುವ ಜಂಟಿ ಗೊತ್ತುವಳಿಯು ಮುಖ್ಯ ವಿಚಾರಗಳಿಗೆ ಸಂಬಂಧಿಸಿ ಪಕ್ಷದ ನೀತಿಗೆ ವ್ಯತಿರಿಕ್ತವಾಗಿರುವು ದನ್ನು ಪಾಲಿಟ್‌ಬ್ಯೂರೋ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯರ ಗಮನಕ್ಕೆ ತಂದಿದೆ. ಈ ಗೊತ್ತುವಳಿಯು ಎಡ ಮತ್ತು ಪ್ರಜಾಪ್ರಭುತ್ವ ಐಕ್ಯತೆಯ ಪರಿಕಲ್ಪನೆಯನ್ನು ಕೇವಲ ಒಂದು ಚುನಾವಣೆ ಮತ್ತು ಸರ್ಕಾರ ರಚನೆಯ ಸೂತ್ರವನ್ನಾಗಿ ಕಾಣುವಂತಿದೆ. ಅಲ್ಲದೆ ಇದು ಸರ್ವಾಧಿಕಾರಿ ಶಕ್ತಿಯ ಗಂಡಾಂತರದ ವಿರುದ್ಧ ವಿಶಾಲ ಪ್ರತಿ ರೋಧ ವೇದಿಕೆಯ ಅಗತ್ಯವನ್ನು ನಿರ್ಲಕ್ಷಿಸಿದೆ. ಗೊತ್ತುವಳಿಯು ಈ ಲೋಪಗಳಿಂದ ಕೂಡಿದೆಯೆಂದು ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯರು ಒಪ್ಪಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಸಿ.ಪಿ.ಐ.ನೊಂದಿಗೆ ಜಂಟಿಸಾಮೂಹಿಕ ಚಟುವಟಿಕೆಗಳನ್ನು ಬೆಳೆಸುವ ಮತ್ತು ಎಡ ಪಕ್ಷಗಳ ಐಕ್ಯತೆ ಯನ್ನು ಬಲಪಡಿಸುವ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಇಚ್ಛೆಯನ್ನು ಪಾಲಿಟ್ ಬ್ಯೂರೋ ಅನುಮೋದಿಸಿದೆ.

o

ವಿಲೀನದ ಪ್ರಶ್ನೆಯೇ ಇಲ್ಲ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಲಿಯು ಈ ಕೆಳಗಿನ ಪತ್ರಿಕಾ ಹೇಳಿಕೆಯನ್ನಿತ್ತಿದೆ.

"ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಲಿ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಲಿಗಳು ಹಲವಾರು ಬಾರಿ ಮಾತುಕತೆ ನಡೆಸಿ ಜನತೆಯನ್ನು ತುರ್ತಾಗಿ ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಜಂಟೀ ಹೋರಾಟ ಗಳನ್ನು ನಡೆಸುವುದಕ್ಕೆ ಯೋಚಿಸಿ ದುವು. ಇದನ್ನು ಕಾರ್ಯಗತಗೊಳಿ ಸುವುದಕ್ಕಾಗಿ ಜೂನ್ ಹನ್ನೊಂದ ರಂದು ಒಂದು ಜಂಟೀ ಸಮಾವೇಶ ವನ್ನು ನಡೆಸಲಾಯಿತು. ಕೆಲವು ರಾಷ್ಟ್ರೀಯ ಪತ್ರಿಕೆಗಳು ಮತ್ತು ಸಿ. ಪಿ. ಐ. ಯ ಮುಖ ಪತ್ರಿಕೆ "ನ್ಯೂ ಏಜ್" ನಂತವು ಈ ಸಮಾವೇಶವು ಕಮ್ಯುನಿಸ್ಟ್ ಐಕ್ಯತೆ

(8ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

ಕಬ್ಬು ಬೆಳೆಗಾರರ ಹೋರಾಟಕ್ಕೆ ನಾಂದಿ

—ಎನ್ಕೆ

ನರಗುಂದ, ಶಿವಮೊಗ್ಗ, ನಿಪ್ಪಾಣಿ, ಕೋಲಾರ ಮೊದಲಾದೆಡೆಗಳ ರೈತರ ಹೋರಾಟದಲ್ಲಿ ಪೋಲೀಸರ ಗೋಳೀಬಾರಿನಿಂದ ಚಿಮ್ಮಿದ ರೈತರ ರಕ್ತ ಇನ್ನೂ ಹಸಿಯಿರುವಾಗಲೇ, ತಮ್ಮ ಸತತ ಐಕ್ಯ ಹೋರಾಟದ ಫಲವಾಗಿ ರೈತರು ಪಡೆದ ಕಬ್ಬಿನ ಬೆಲೆಯನ್ನು ಕುಂಟು ನೆವ ಮುಂದೆ ಮಾಡಿ ಸರಕಾರ ಕಡಿಮೆ ಮಾಡಿದೆ.

ರಾಜ್ಯ ಸರಕಾರವು ಯಾವ ವಿವೇಚನೆಯಿಲ್ಲದೆ ಹೋದ ವರ್ಷ ನಿಗದಿಪಡಿಸಿದ ಕಬ್ಬಿನ ಬೆಲೆಯನ್ನು ರೂ. 216-80 ರಿಂದ ಈ ವರ್ಷ ರೂ. 186-80ಕ್ಕೆ ಇಳಿಸಿದೆ.

ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ತಾನು ಭಾರತ ದೇಶಕ್ಕೆ ರೂ. 5000 ಕೋಟಿ ಸಲ ನೀಡುವಾಗ ಗೊಬ್ಬರ, ಆಹಾರ ಧಾನ್ಯಗಳ ಖರೀದಿ ಮೊದಲಾದವುಗಳಿಗೆಲ್ಲ ಸರಕಾರ ನೀಡುತ್ತಿದ್ದ ಧನ ಸಹಾಯವನ್ನು ರದ್ದುಪಡಿಸಬೇಕೆಂಬ ಕರಾರು ಹಾಕಿದ್ದು, ಆ ಕಾರಣದಿಂದಾಗಿ ರಸಾಯನಿಕ ಗೊಬ್ಬರ ಹಾಗೆಯೇ ರೈತರು ಉಪಯೋಗಿಸುವ ಇತರ ವಸ್ತುಗಳ ಬೆಲೆಯೂ ಹೆಚ್ಚಾಗಿ, ಕಬ್ಬು ಬೆಳೆ ದುಬಾರಿಯಾಗಿದೆ ಸಕಾಲದಲ್ಲಿ ನೀರು ಒದಗಿಸದೆ ರೈತರು ಕಷ್ಟಕ್ಕೀಡಾಗಿದ್ದಾರೆ. ರೈತರು ಕೊಂಡುಕೊಳ್ಳುವ ಬಟ್ಟೆ, ಆಹಾರ ಧಾನ್ಯ, ಕಬ್ಬಿಣ, ಸಿಮೆಂಟ್, ಮಕ್ಕಳ ಶಿಕ್ಷಣಗಳೂ ತುಟ್ಟಿಯಾಗಿರುವಾಗ, ಇದನ್ನು ಹೊಂದಿಕೊಂಡು ಈ ವರ್ಷದ ಕಬ್ಬಿನ ಬೆಲೆಯನ್ನು ನಿರ್ಧರಿಸದಿರುವುದರಿಂದ ಕಬ್ಬು ಬೆಳೆಗಾರರಿಗೆ ಅಪಾರ ಅನ್ಯಾಯವಾಗಿದೆ. ಕಬ್ಬಿನ ಬೆಳೆ ಹೆಚ್ಚಾಗಿದೆ, ಸಕ್ಕರೆ ಉತ್ಪಾದನೆ ಜಾಸ್ತಿಯಾಗಿದೆ, ಕಾರಣ ಸಕ್ಕರೆ ಕಾರ್ಖಾನೆದಾರರಿಗೆ ಹಾನಿಯಾಗುತ್ತದೆಂಬ ನೆವ ಮುಂದೆ ಮಾಡಿ ಕಬ್ಬಿನ ಬೆಲೆಯನ್ನುಕಡಮೆಮಾಡಲಾಗಿಯೆಂದು ಸರಕಾರದ ವಾದ. ಸಕ್ಕರೆ ಕಾರ್ಖಾನೆ ಮಾಲಿಕರಿಗೆ ಸಹಾನುಭೂತಿ ತೋರಿಸುವ ಈ ಬಂಡವಾಳಶಾಹೀ ಸರಕಾರ ಕಬ್ಬು ಬೆಳೆಗಾರರನ್ನು ಕಡೆಗಣಿಸುತ್ತಿರುವುದು ತೀರ ಅನ್ಯಾಯ.

ಬಂಡವಾಳಶಾಹಿ ಆರ್ಥಿಕ ನೀತಿಯನ್ನನುಸರಿಸುತ್ತಿರುವ ಕಾಂಗ್ರೆಸ್ ಸರಕಾರ ಒಕ್ಕಲತನ ಕ್ಷೇತ್ರದಲ್ಲಿ ಸರಿಯಾದ ಯೋಜನೆ ಅಳವಡಿಸಿಕೊಳ್ಳದಿರುವುದೇ ಈ ಗೊಂದಲಕ್ಕೆ ಕಾರಣ. ನಮ್ಮ ದೇಶದಲ್ಲಿ ಖರ್ಚಾಗುವ ಹಾಗೂ ವಿದೇಶಗಳಿಗೆ ರಫ್ತು ಮಾಡಲು ಬೇಕಾಗುವಷ್ಟು ಸಕ್ಕರೆ ಉತ್ಪಾದನೆ ಮಾಡಲು ಎಷ್ಟು ಎಕರೆ ಕ್ಷೇತ್ರದಲ್ಲಿ ಕಬ್ಬು ಬೆಳೆಯಬೇಕು, ಆಹಾರ ಧಾನ್ಯ, ಬೇಳೆಕಾಳು, ಎಣ್ಣೆ ಕಾಳುಗಳಿಗೆ ಎಷ್ಟು ಕ್ಷೇತ್ರ ಮೀಸಲು ಎಂಬುದನ್ನು ನಿರ್ಧರಿಸಿ ರೈತರಿಗೆ ಆದೇಶ ನೀಡಿದ್ದರೆ, ಎಣ್ಣೆ, ಬೇಳೆಕಾಳುಗಳು ಕಡಿಮೆ ಬೆಳೆದು ತುಟಾಗ್ರತೆ ಉಂಟುಮಾಡುವುದಾಗಲಿ, ಕಬ್ಬು ಹೆಚ್ಚು ಬೆಳೆದು ಬೆಲೆ ಕಡಿಮೆ ಮಾಡುವ ಸಂದರ್ಭವಾಗಲಿ ಉಂಟಾಗುತ್ತಿರಲಿಲ್ಲ. ಸರಕಾರದ ನೀತಿಯಿಂದಾಗಿ ರೈತರೂ, ಸಾರ್ವಜನಿಕರೂ ತೊಂದರೆಗೊಳಗಾಗಬೇಕಾಗಿದೆ. ಇಂಥ ಸರಕಾರದ ಬದಲಿಕೆಗಾಗಿ ಹೋರಾಡಬೇಕು. ಕಬ್ಬು ಬೆಳೆಗಾರರಿಗೆ ಯೋಗ್ಯ ಬೆಲೆ ಸಿಗುವಂತೆ ಚಳುವಳಿ ಹೂಡಬೇಕು.

ರೈತನ ಬೆಳೆಗೆ ವಿಮೆ

ಪುರೋಹಿತರು ಮಂತ್ರಪಠಿಸುವಂತೆಯೇ ಕರ್ನಾಟಕ ರಾಜ್ಯದ ಮಂತ್ರಿಗಳು ಆಶ್ವಾಸನೆಗಳ ಸುರಿಮಳೆ ಗೈಯ್ಯುವುದರಲ್ಲಿ ಹಿಂದೆಬಿದ್ದಿಲ್ಲ. ಗುರು ಗುಂಡೂರಾಯರಂತೆ ಶಿಷ್ಯಮರಿಗಳದ್ದೂ ಒಂದೇ ಪಾಠ–ಮಾಡಿಯೇ ತೀರುತ್ತೇವೆಂಬುದು. ಎಲ್ಲ ಗುಣಗಳಲ್ಲೂ ಪರಿಣಿತರಾದ ಸಹಕಾರ ಸಚಿವ ಶ್ರೀಕಂಠಯ್ಯನವರು, ನಿರಾವರಿ ಪ್ರದೇಶದಲ್ಲಿ ರೈತರಿಗೆ ಬೆಳೆ ವಿಮೆಯ ಸೌಲಭ್ಯ ಕೊಡಿಸುತ್ತೇವೆಂಬ ಕಡಾಖಂಡಿತ ಆಶ್ವಾಸನೆ ನೀಡಿದರು. ಇಂಥ ಆಶ್ವಾಸನೆಗಳನ್ನು ಕಳೆದ 30 ವರ್ಷಗಳಿಂದ ಮಂತ್ರಿಗಳೂ, ಅಧಿಕಾರಿಗಳೂ, ಕೊಡುತ್ತಲೇ ಬಂದಿದ್ದಾರೆ. ರೈತ ಸಂಘಗಳೂ ಇದರ ಕುರಿತು ಬೇಡಿಕೆ ಮಂಡಿಸುವುದರಲ್ಲಿ ಹಿಂದೇನೂ ಬಿದ್ದಿಲ್ಲ. ಮಂತ್ರಿಗಳು ವಿಮಾ ಕಾರ್ಪೊರೇಷನಿನೊಡನೆ ಚರ್ಚಿಸುವುದಾಗಿಯೂ ಹೇಳಿದ್ದಾರೆ. ಚರ್ಚೆಯ ಪ್ರತಿಫಲವೇನೆಂಬುದನ್ನು ರೈತರೆಲ್ಲ ಅತ್ಯಂತ ಕಾತುರದಿಂದ ಕಾದು ನೋಡುತ್ತಾರೆಂಬುದನ್ನು ಮಂತ್ರಿ ಮಹಾಶಯರು ಮರೆಯದಿದ್ದರೆ ಸಾಕು.

ನೀರಾವರಿ ಪ್ರದೇಶಕ್ಕಷ್ಟೇ ಈ ಯೋಜನೆಯನ್ನು ಮೀಸಲಾಗಿಡದೆ, ಬರಗಾಲಪೀಡಿತ ಪ್ರದೇಶಗಳಿಗೂ ಇದರ ಅವಶ್ಯಕತೆಯಿದೆಂಬುದನ್ನು ತಿಳಿದುಕೊಳ್ಳಬೇಕು. ನೀರಾವರಿ ಪ್ರದೇಶಗಳಲ್ಲಿ, ಕಾಲಕ್ಕೆ ಸರಿಯಾಗಿ ಕಾಲುವೆಯಿಂದ ನೀರು ಪೂರೈಸಲ್ಪಡುತ್ತಿಲ್ಲ. ಮಳೆಗಾಲದಲ್ಲಿ ನೀರು ಜಾಸ್ತಿಯಾಗಿ ಭೂಮಿ ಸವಳಾಗಿ (ಕ್ಷಾರ) ಬೆಳೆ ನಾಶವಾಗುತ್ತಿರುವ ತಕರಾರುಗಳು ಬಹಳಷ್ಟು ಕೇಳಿ ಬರುತ್ತಿವೆ. ಈ ಅಪಾಯದಿಂದಿ ರೈತರನ್ನು ರಕ್ಷಿಸುವಲ್ಲಿ ಸರಕಾರ ಸಮರ್ಥವಾಗಿಲ್ಲ. ಬರಗಾಲ ಪ್ರದೇಶದ ರೈತರ ಗಂಭೀರ ಪರಿಸ್ಥಿತಿಯನ್ನು ವರ್ಣಿಸಲು ಸಾಧ್ಯವಿಲ್ಲ. ಕರ್ನಾಟಕ ರಾಜ್ಯದ 75-80 ಭಾಗದ ರೈತರಿಗೆ ಸಂರಕ್ಷಣೆ, ಭದ್ರತೆ ನೀಡುವಲ್ಲಿ ಬೆಳೆಯ ವಿಮೆ ಮಹತ್ವದ ಪಾತ್ರ ವಹಿಸುತ್ತದೆ. ನಗರ ಕಾರ್ಪೊರೇಶನ್, ಸೊಸೈಟಿ, ಕಾಂಗ್ರೆಸ್ ಪಕ್ಷದ ಚುನಾವಣೆಗಳನ್ನು ನಡೆಸಿಯೇ ತೀರುತ್ತೇವೆಂಬ ಗಡವುಗಳನ್ನು ವಿಧಾನ ಸಭೆಯಲ್ಲಿ ಪ್ರಕಟಿಸಿ ಹುಸಿಗೊಳಿಸಿದಂತೆ ಬೆಳೆ ವಿಮೆಯ ಆಶ್ವಾಸನೆಯನ್ನು ಪೊಳ್ಳುಗೊಳಿಸಿದ್ದಾದರೆ ಇಡೀ ರೈತ ಜನಾಂಗ ತೀವ್ರ ಚಳುವಳಿಯ ದಾರಿ ಹಿಡಿಯಬೇಕಾದೀತು.

ಶಿಕ್ಷಣ ಸಚಿವರ ಬೊಬ್ಬೆ

ಮೂವತ್ತು ವರ್ಷಗಳಿಂದಲೂ ತಮ್ಮ ಸಮಸ್ಯೆಗಳು ಬಗೆಹರಿಸಲ್ಪಟ್ಟಿಲ್ಲೆಂದು ಸಾರ್ವಜನಿಕರು ಅಧಿಕಾರಿಗಳ-ಮಂತ್ರಿಗಳೆದುರಿಗೆ ಬೊಬ್ಬಿಡುವುದು ಸಹಜ. ಈಗ ಪಾಲಕರೂ, ಮಕ್ಕಳೂ ಬೊಬ್ಬಿಡುವಂತೆ ಮಾಡಿದೆ ಶಿಕ್ಷಣ ಖಾತೆ. ಹೋದ ವರ್ಷ 2ನೇ ವರ್ಷದ ಬಿ.ಕಾಂ. ಹುಡುಗರಿಗೆ ಬಿಜಾಪುರದಲ್ಲಿ ಇಂಗ್ಲೀಷ್ ಟೆಕ್ಸ್ಟ ಪುಸ್ತಕ ಪರೀಕ್ಷೆ ಮುಗಿಯುವವರೆಗೂ ಲಭ್ಯವಾಗಿಲ್ಲ. ಕ್ಲಾಸಿನಲ್ಲಿ ಪ್ರೊಫೆಸರರು ಬರೆಸುವ ಟಿಪ್ಪಣಿಗಳ ಆಧಾರದಲ್ಲೇ ಪರೀಕ್ಷೆಯನ್ನೆದುರಿಸಬೇಕಾಯಿತು. ಈ ವರ್ಷ ಎಂಟನೇ ಇಯತ್ತೆಯ ವಿದ್ಯಾರ್ಥಿಗಳಿಗಾಗಿ ಛಾಪಿಸಲ್ಪಟ್ಟ ರೂ. 5 ಲಕ್ಷಕ್ಕೂ ಮೇಲ್ಪಟ್ಟು ಪುಸ್ತಕಗಳಲ್ಲಿ ತಪ್ಪುಗಳಾಗಿವೆಂದು ಕಂಡುಬಂದನಂತರ ಅವುಗಳನ್ನು ಬೀದಿಯಲ್ಲಿ ಚೆಲ್ಲಿ ಹೊಸ ಪುಸ್ತಕ ಛಾಪಿಸಲಾಯಿತು. ಇದೀಗ ಪ್ರಕಟವಾದ ಸುದ್ದಿಯಂತೆ ಪ್ರಾಥಮಿಕ ಮತ್ತು ಮಾಧ್ಯಮಿಕ ಇಂಗ್ಲೀಷ್ ಪುಸ್ತಕದಲ್ಲಿ ಇಂಗ್ಲೀಷ್ ಮತ್ತು ಉರ್ದು ಹಾಗೆಯೇ ಇತರ ಹಲವಾರು ಪಠ್ಯ ಪುಸ್ತಕಗಳಲ್ಲಿ ನಾನಾ ಭಾಷೆಗಳ ಪುಟಗಳನ್ನು ಸೇರಿಸಲಾಗಿದೆಯಂತೆ. ಪಿ. ಯು ಸಿ. ಯ ಪುಸ್ತಕಗಳಲ್ಲೂ ಬದಲಾವಣೆ ಮಾಡಲಾಗುತ್ತಿದೆಯಂತೆ. ಕೆ.ಪಿ.ಸಿ.ಸಿ. ಅಧ್ಯಕ್ಷರ ಪದಚ್ಯುತಿ, ನವೆಂಬರ್ ತಿಂಗಳಲ್ಲೇ ಚುನಾವಣೆ ನಡೆಯಬಹುದೆಂಬ ಗುಂಡೂರಾಯರ ಊಹೆಗಳು ಶಂಕರರಾಯರ ಶಿಕ್ಷಣ ಖಾತೆಯನ್ನೇ ಹುಚ್ಚರ ಆಸ್ಪತ್ರೆಯನ್ನಾಗಿ ಪರಿವರ್ತಿಸಿದೆಯೇ ಎಂಬ ಶಂಕೆ ಪಾಲಕರಲ್ಲೂ, ವಿದ್ಯಾರ್ಥಿಗಳಲ್ಲೂ ಉಂಟುಮಾಡಿದೆ. ಅಸಂಬದ್ಧ ಪಾಠಗಳನ್ನೊಳಗೊಂಡ ಹಲವಾರು ಭಾಷೆಗಳನ್ನು ಸಮಿಾಕರಣ ಮಾಡಿಕೊಂಡ ಪಠ್ಯ ಪುಸ್ತಕಗಳು ಮಕ್ಕಳ ಕೈ ಸೇರುತ್ತಿವೆ. ಸಕಾಲದಲ್ಲಿ ಪುಸ್ತಕಗಳು ಪೂರೈಸಲ್ಪಡುತ್ತಿಲ್ಲ. ಪಾಲಕರೂ–ಮಕ್ಕಳೂ ಬೊಬ್ಬಿಡದೇನು ಮಾಡಿಯಾರು ?

ಇವರಿಗಷ್ಟೇ ಬೊಬ್ಬಿಡುವ ಅವಕಾಶ ಕಲ್ಪಿಸಿಕೊಟ್ಟರೆ ತನ್ನ ಪಾಡೇನು ಎಂದು ತಿಳಿದು ಆ ಹಕ್ಕು ತನಗೂ ಮೀಸಲಾಗಿದೆಂದು ಶಿಕ್ಷಣ ಮಂತ್ರಿ ಶಂಕರರಾಯರು ಮೊನ್ನೆ ವಿಧಾನ ಪರಿಷತ್ತಿನಲ್ಲಿ ತಾವೇ ಬೊಬ್ಬೆ ಹಾಕಿದರು. ಬಿ.ಇಡಿ ಪರೀಕ್ಷೆ ಈಗಾಗಲೇ ಮುಗಿಯಬೇಕಾಗಿತ್ತು. ಕೆಲವು ಶಿಕ್ಷಣ ಸಂಸ್ಥೆಯವರ ತಪ್ಪಿಗಾಗಿ ವಿದ್ಯಾರ್ಥಿಗಳು ಬಾವಿ ಬೀಳಬೇಕೆ ? ಅತ್ತೆಯ ತಪ್ಪಿಗಾಗಿ ಸೊಸೆಗೆ ಶಿಕ್ಷೆಯೇ ? ಶಿಕ್ಷಣ ಸಂಸ್ಥೆಗಳು ತಪ್ಪು ಮಾಡಿದ್ದಕ್ಕೆ ಅವರ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳದೆ, ಪರೀಕ್ಷೆ ನಡೆಸುವುದಕ್ಕೆ ತಡೆಯುಂಟುಮಾಡುವುದು ಸರಿಯಲ್ಲವೆಂದು ಸದಸ್ಯರು ಶಿಕ್ಷಣ ಮಂತ್ರಿಗಳನ್ನು ತರಾಟೆಗೆ ತೆಗೆದುಕೊಂಡಾಗ ಶಿಕ್ಷಣ ಮಂತ್ರಿಗಳು ತಾಳ್ಮೆಗೆಟ್ಟು ಎಗರಾಡಿದರು. ಮಂತ್ರಿಗಳ ಕೋಪ ಬರೇ ವಿರೋಧ ಪಕ್ಷದ ಸದಸ್ಯರನ್ನಷ್ಟೇ ಸುಡಲು ಪ್ರಯತ್ನ ನಡೆಸಿಲ್ಲಷ್ಟೆ ಅಲ್ಲ ತನ್ನ ಪಕ್ಷದವರ ಮೇಲೂ ಕೆಂಡ ಕಾರಿದರು. ತನ್ನ ಪಾರ್ಟಿಯ ಸದಸ್ಯರನ್ನು ಹತೋಟಿಯಲ್ಲಿಡುವಂತೆ ಪಕ್ಷದ ಮುಖಂಡರಿಗೆ ಕೇಳಿಕೊಂಡರು.

ಮಂತ್ರಿಗಳ ವರ್ತನೆ ಇಡೀ ಕನ್ನಡ ನಾಡಿಗೆ ಅಪಮಾನಕಾರಕವಲ್ಲವೇ ? ಇಂಥ ವರ್ತನೆಯನ್ನು ಜನತೆ ಪ್ರತಿಭಟಿಸಲೇಬೇಕು.

ಬಾಲಂಗೋಚಿ

ಸಹಕಾರಿ ಸಂಘಗಳ, ಬ್ಯಾಂಕುಗಳ ಚುನಾವಣೆ ಹೋದ ವರ್ಷ ಸೆಪ್ಟೆಂಬರ್ ತಿಂಗಳಲ್ಲೇ ನಡೆಯಬೇಕಾಗಿತ್ತು. ಈ ಸಹಕಾರಿ ಸಂಸ್ಥೆಗಳಲ್ಲಿಯ ಆಕ್ಟಿನಲ್ಲಿ ಬದಲಾವಣೆಯನ್ನುಂಟುಮಾಡಿ ಹಿಂದುಳಿದವರಿಗೂ ಯೋಗ್ಯ ಸ್ಥಾನ ಕೊಡಿಸಬೇಕೆಂಬ ಉದ್ದೇಶದಿಂದ ಚುನಾವಣೆಯನ್ನು 3 ತಿಂಗಳು ಮುಂದೆ ಹಾಕಲಾಗಿತ್ತು. ಕೆ. ಎಚ್. ಪಾಟೀಲ್ ಕಮಿಟಿಯ ವರದಿ ಸರಕಾರದ ಮುಂದೆ ಕಳೆದ ಹಲವಾರು ತಿಂಗಳುಗಳಿಂದ ಧೂಳು ಲೇಪನ ಮಾಡಿಕೊಂಡು ನಿದ್ರಾವಸ್ಥೆಯಲ್ಲಿದೆ. ತಮ್ಮ ಗುಂಪುಗಾರಿಕೆ ಗೊಂದಲದಲ್ಲಿ ಅದನ್ನು ನೋಡುವಷ್ಟು ಸಮಯ ಮಂತ್ರಿಗಳಿಗಿಲ್ಲ. ಕಾರಣ ಸಹಕಾರಿ ಸಂಘಗಳ ಚುನಾವಣೆ ಅನಿಯಮಿತಕಾಲ ಮುಂದಕ್ಕೆ ಹಾಕಲಾಗಿದೆ. ವಿಧಾನ ಸಭೆ ಚುನಾವಣೆ ಮುಗಿಯುವವರೆಗಂತೂ ಈಗಿರುವ ಚೇರ್ಮನ್, ಡೈರೆಕ್ಟರರೇ ಸಾಕಷ್ಟು ಮೇಯಲು ಅವಕಾಶ. ಚುನಾವಣಾ ನಿಧಿ ಕೊಡುಗೆಗೂ ಇವರದೇ ಮುಂದುಕೈ. ಇದು ಕಾಂಗ್ರೆಯ ಸಹಕಾರಿ ಚಳುವಳಿಯ ಮಾದರಿ. "ಚಿಂತೆ ಯಾತಕೋ ಮನುಜಾ, ಭ್ರಾಂತಿ ಯಾತಕೋ, ಸೊಸೈಟಿ ಆಡಳಿತ ಕೈಯ್ಯಲ್ಲಿದ್ದರೆ ಸಾಕೋ".

ಈ ವರ್ಷ 84 ಲಕ್ಷ ಟನ್‌ಗಿಂತಲೂ ಹೆಚ್ಚು ಸಕ್ಕರೆ ಉತ್ಪಾದನೆಮಾಡಿ ಬ್ರೆಜಿಲ್‌ಗಿಂತಲೂ ಭಾರತ ದೇಶ ಮುಂದಾಗಿ ಜಗತ್ತಿನಲ್ಲೇ ಅತಿ ಹೆಚ್ಚು ಸಕ್ಕರೆ ಉತ್ಪಾದಿಸುವ ದೇಶವಾಗಿ ಹೆಸರುಗಳಿಸಿದೆ. ಬಡತನ ನಿರುದ್ಯೋಗ, ನೆರೆ ಹಾವಳಿ, ಬರಗಾಲ, ಮೂಢ ನಂಬಿಕೆಗಳಿಗೆಲ್ಲ ಭಾರತ ದೇಶ ಹೆಸರುವಾಸಿಯಾಗಿದೆ ಜಗತ್ತಿನಲ್ಲಿ. ಈಗ ಸಕ್ಕರೆ ಉತ್ಪಾದನೆಯಲ್ಲೂ ನಾವೇ ಮುಂದೆ. ಆದರೆ ಕಬ್ಬು ಬೆಳೆಯುವ ರೈತ ಕಬ್ಬಿಗೆ ಯೋಗ್ಯ ಬೆಲೆ ಸಿಗದೆ ಅಳುತ್ತಾನೆ. ತಮ್ಮ ಮಕ್ಕಳಿಗೆ ಕುಡಿಸುವ ಒಂದು ಗುಟುಕು ಹಾಲಿಗೆ ಒಂದು ಚಮಚೆ ಸಕ್ಕರೆ ಕೈಗೆಟಕುತ್ತಿಲ್ಲೆಂದು ಗುಡಿಸಲು ವಾಸಿಗಳು ನಿಟ್ಟುಸಿರು ಬಿಡುತ್ತಿದ್ದಾರೆ. ಸಕ್ಕರೆ ರಾಜಾ ಸೋಮಾನಿಗೂ, ದೇಶದ ರಾಣಿ ಇಂದಿರಾ ಗಾಂಧಿಗೂ ಈ ಉಸಿರಿನ ಬಿಸಿತಾಗುವುದಿಲ್ಲವಲ್ಲ.

●

ಕಾಂ| ಸತ್ಯನಾರಾಯಣ ಸಿಂಗ್ ನಿಧನ

ಸಿ.ಪಿ.ಐ. (ಎಂ) ಉತ್ತರ ಪ್ರದೇಶ ರಾಜ್ಯ ಸಮಿತಿಯ ಸದಸ್ಯ ಕಾಂ| ಸತ್ಯನಾರಾಯಣ ಸಿಂಗ್ ತೀವ್ರ ಅನಾರೋಗ್ಯದಿಂದಾಗಿ ನಿಧನರಾದುದಕ್ಕೆ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯ ಪಾತ್ರವಹಿಸಿದ್ದ ಕಾಂ| ಸತ್ಯನಾರಾಯಣ ಸಿಂಗ್ ಅನೇಕ ಸಲ ಜೈಲುವಾಸಕ್ಕೆ ಗುರಿಯಾಗಿದ್ದರು. ಭಗತ್ ಸಿಂಗರ ನೇತೃತ್ವದ ಹಿಂದೂಸ್ತಾನ್ ಸೋಷಲಿಸ್ಟ್ ರಿಪಬ್ಲಿಕನ್ ಆರ್ಮಿ (ಹೆಚ್.ಎಸ್.ಆರ್.ಎ.)ಯ ಸಕ್ರೀಯ ಸದಸ್ಯರಾಗಿದ್ದರು. ನಂತರ ಕಮ್ಯೂನಿಸ್ಟ್ ಪಾರ್ಟಿಗೆ ಬಂದಿದ್ದರು.

1962-67ರ ಅವಧಿಯಲ್ಲಿ ಕಾಂ| ಸತ್ಯನಾರಾಯಣ ಸಿಂಗ್ ಲೋಕ ಸಭಾ ಸದಸ್ಯರಾಗಿದ್ದರು. 1964ರಲ್ಲಿ ಪಕ್ಷ ಇಬ್ಭಾಗವಾದಾಗ ಸಿ. ಪಿ. ಐ. (ಎಂ) ನೊಟ್ಟಿಗೆ ನಿಂತ ಕಾಂ| ಸತ್ಯನಾರಾಯಣ ಸಿಂಗ್, ಉ. ಪ್ರ. ದಲ್ಲಿ ಪಕ್ಷದ ಆಧಾರ ಸ್ತಂಬದಂತಿದ್ದರು.

●

ಕರ್ನಾಟಕ ರಾಜ್ಯದಲ್ಲಿ ಭಾಷೆಯ ಪ್ರಶ್ನೆ--

ಗೋಕಾಕ್ ಸಮಿತಿ ವರದಿಯ ಶಿಫಾರಸಿಗೆ ಸಂಬಂಧಿಸಿ ಉದ್ಭವಿಸಿರುವ

ಪ್ರಸ್ತಾವನೆ:

ಈಗ ಕರ್ನಾಟಕ ರಾಜ್ಯವಾಗಿರುವ ಹಳೆ ಮೈಸೂರು, ಮದ್ರಾಸು ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮುಂಬಯಿ ಕರ್ನಾಟಕ ಮತ್ತು ಕೊಡಗು ಪ್ರದೇಶಗಳನ್ನು ಒಂದುಗೂಡಿಸಿ, ಕರ್ನಾಟಕ ರಾಜ್ಯವನ್ನಾಗಿ ರೂಪಿಸಿಕೊಳ್ಳುವುದಕ್ಕಾಗಿ ನಡೆದಿರುವ ಏಕೀಕರಣ ಚಳುವಳಿಯಲ್ಲಿ, ಭಾಷಾವಾರು ರಾಜ್ಯಗಳ ರಚನೆಗಾಗಿ ನಡೆದಿರುವ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷವು ಸಕ್ರಿಯವಾಗಿ ಭಾಗವಹಿಸಿತ್ತು. ಹೋರಾಟದ ಮುಂಚೂಣಿಯಲ್ಲಿತ್ತು. ಆಗ ಒಂದಾಗಿದ್ದ (ಈಗ ಸಿಪಿಐ ಮತ್ತು ಸಿಪಿಐ(ಎಂ) ಗಳೆಂದು ಎರಡಾಗಿರುವ) ಕಮ್ಯೂನಿಸ್ಟ್ ಪಕ್ಷದ ಅನೇಕ ಮುಂದಾಳುಗಳೂ, ಕಾರ್ಯಕರ್ತರುಗಳೂ ಜೈಲುವಾಸವನ್ನು ಅನುಭವಿಸಬೇಕಾಗಿ ಬಂದಿತ್ತು. ಕರ್ನಾಟಕ ರಾಜ್ಯದ ಪುನರ್ ಸಂಘಟನೆಯಾದೊಡನೆಯೇ ರಾಜ್ಯದ ಹೆಸರನ್ನು ಕರ್ನಾಟಕವೆಂಬುದಾಗಿ ಘೋಷಿಸಬೇಕೆಂದು ಕಮ್ಯೂನಿಸ್ಟ್ ಪಕ್ಷವು ಸರಕಾರವನ್ನು ಒತ್ತಾಯಿಸಿತು. ರಾಜ್ಯವನ್ನಾಳಿಕೊಂಡು ಬಂದಿರುವ ಸರಕಾರಗಳು ಇತ್ತೀಚಿಗಿನ ತನಕ ರಾಜ್ಯದ ಹೆಸರನ್ನು ಮೈಸೂರು ರಾಜ್ಯವೆಂದೇ (ದೇವರಾಜ ಅರಸು ಅವರ ಸರಕಾರ ಅದನ್ನು ಬದಲಾಯಿಸುವ ತನಕ) ಹೇಳಿಕೊಂಡು ಬಂದಿವೆ ಯಾದರೂ ಕಮ್ಯೂನಿಸ್ಟ್ ಪಕ್ಷವು ಅಂದಿನಿಂದಲೇ ಕರ್ನಾಟಕವೆಂಬ ಪದ ಪ್ರಯೋಗ ಮಾಡುತ್ತಾ ಬಂದಿದೆ. ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಮಂಡಳಿ, ಕರ್ನಾಟಕ ಪ್ರಾಂತ ರೈತ ಸಂಘ, ಇತ್ಯಾದಿಯಾಗಿ ಬಳಕೆ ಮಾಡಲಾಗಿದೆ.

ಕರ್ನಾಟಕ ರಾಜ್ಯದ ಏಕೀಕರಣವಾಗಿ 25 ವರ್ಷಗಳು ಸಂದರೂ, ರಾಜ್ಯ ಭಾಷೆಯಾದ ಕನ್ನಡದ ಅಭಿವೃದ್ಧಿ, ಪ್ರಗತಿ ಗಮನಾರ್ಹವಾಗಿ ಆಗಿಲ್ಲ. ರಾಜ್ಯದ ಹೆಸರನ್ನು ಕರ್ನಾಟಕವೆಂಬುದಾಗಿ ಮಾಡಿದರೂ, ಕನ್ನಡವನ್ನು ಆಡಳಿತ ಭಾಷೆಯೆಂದು ಸಾರಲಾಗಿದ್ದರೂ, ಕನ್ನಡವು ಜನಭಾಷೆಯಾಗಿ, ರಾಜ್ಯದ ಎಲ್ಲ ಜನರೂ ಮಾತನಾಡುವ ಭಾಷೆಯಾಗಿ ಬೆಳೆದು ಬಂದಿಲ್ಲ. ಕರ್ನಾಟಕದಲ್ಲಿರುವ ಕನ್ನಡ ಮಾತೃ ಭಾಷೆಯ ಶೇ. 70 ರಷ್ಟು ಜನಕ್ಕೆ ಕನ್ನಡ ಓದುವುದೂ ಸಾಧ್ಯವಿಲ್ಲ. ಅವರಿಗೆ ಅಕ್ಷರಾಭ್ಯಾಸವಿಲ್ಲ! ಭಾಷೆಗೂ ಉದ್ಯೋಗಕ್ಕೂ, ಭಾಷೆಗೂ ಜನಜೀವನಕ್ಕೂ ಸಂಬಂಧವಿದೆ. ರಾಜ್ಯದಲ್ಲಿ ಬಹುಶೇಕ ಜನ ಮಾತನಾಡುವ ಕನ್ನಡವನ್ನು, ಅಂದರೆ ರಾಜ್ಯ ಭಾಷೆಯನ್ನು ಆಡಳಿತದ ಎಲ್ಲ ಹಂತಗಳಲ್ಲೂ ಕಟ್ಟುನಿಟ್ಟಾಗಿ ಬಳಸುವುದನ್ನು ಜಾರಿಗೆ ತಂದಲ್ಲಿ, ರಾಜ್ಯದಲ್ಲಿರುವ ಎಲ್ಲ ಜನರೂ ಕನ್ನಡವನ್ನು ಕಲಿಯಲು ಒತ್ತಾಯ, ಪ್ರಚೋದನೆ ಉಂಟಾಗುತ್ತದೆ. ರಾಜ್ಯ ಭಾಷೆಯನ್ನು ಕಟ್ಟುನಿಟ್ಟಾಗಿ ಆಡಳಿತ ಭಾಷೆಯನ್ನಾಗಿ ಮಾಡುವುದರೊಂದಿಗೆ, ಮಾತೃ ಭಾಷೆಯಲ್ಲಿ ವಿದ್ಯಾಭ್ಯಾಸ, ಎಲ್ಲರಿಗೂ ಸಾಕ್ಷರತಾ ಕಾರ್ಯಕ್ರಮ ಮೊದಲಾದುವನ್ನು ಜಾರಿಗೆ ತಂದರೆ ಆಗ ಭಾಷೆಯ ಅಭಿವೃದ್ಧಿಯಾಗುವುದು—ಅದು ಜನಭಾಷೆಯಾಗಿ ಬೆಳೆಯುವುದು ಸಾಧ್ಯವೂ ಆಗುವುದು. ವಸಾಹತುಶಾಹಿಯು ಬಿಟ್ಟು ಹೋಗಿರುವ, ಪರಕೀಯ ಭಾಷೆಯಾದ ಇಂಗ್ಲಿಷನ್ನು ದೂರ ಮಾಡುವುದು ಮತ್ತು ಕನ್ನಡವನ್ನು ನಿಜವಾದ ಅರ್ಥದಲ್ಲಿ ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಳ್ಳದೆ, ಶೈಕ್ಷಣಿಕ ರಂಗದಲ್ಲಿ ರಾಜ್ಯ ಭಾಷೆಗೆ ಉಳಿದ ಮಾತೃ ಭಾಷೆಗಳಿಗಿಂತ ಹೆಚ್ಚಿನ ಸ್ಥಾನಮಾನ ಕೊಟ್ಟಲ್ಲಿ ಅದು ಗಾಡಿಯ ಮುಂದೆ ಕುದುರೆಯನ್ನು ನಿಲ್ಲಿಸುವ ಬದಲು ಗಾಡಿಯನ್ನು ಕುದುರೆಯ ಮುಂದೆ ನಿಲ್ಲಿಸಿದಂತಾಗುತ್ತದೆ.

ರಾಜ್ಯ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುವಾಗ, ರಾಜ್ಯ ಭಾಷೆಯನ್ನು ಎಲ್ಲರೂ ಕಲಿಯುವಂತೆ ಮಾಡುವಾಗ, ಕೆಲವು ಅಂಶಗಳನ್ನು ಗಮನದಲ್ಲಿರಿಸಬೇಕು (1) ಭಾಷಾವಾರು ರಾಜ್ಯಗಳಿಂದ ಕೂಡಿದ ಭಾರತ ದೇಶದಲ್ಲಿ ಬೇರೆ ಬೇರೆ ಮಾತೃ ಭಾಷೆಗಳನ್ನಾಡುವ ಜನ ಸಾಕಷ್ಟು ಗಣನೀಯ ಸಂಖ್ಯೆಯಲ್ಲಿರುತ್ತಾರೆ (2) ಕೇಂದ್ರ ಸರಕಾರದ ಹುದ್ದೆಗಳು ಒಂದೇ ಭಾಷೆಯವರಿಗಾಗಿರದೆ, ಎಲ್ಲ ಭಾಷೆಗಳವರಿಗಾಗಿದೆ (3) ಶೈಕ್ಷಣಿಕ ರಂಗದಲ್ಲಿ ಮಾತೃ ಭಾಷೆಗೆ ಪ್ರಾಧಾನ್ಯತೆ ಇರದೇ ಕಾಗುತ್ತದೆ. ಅದುದರಿಂದಲೇ ಒಂದೆಡೆ ರಾಜ್ಯ ಭಾಷೆಗೆ ಅಗ್ರಗಣ್ಯ ಸ್ಥಾನ ದೊರೆಯಲು ಪ್ರಯತ್ನಿಸುವಾಗ, ಇನ್ನೊಂದೆಡೆ ರಾಷ್ಟ್ರದ ಭಾಷಾ ಐಕ್ಯತೆಗೂ ಧಕ್ಕೆ ಬರಬಾರದು—ಬಹು ಸಂಖ್ಯಾತರ ಮಾತೃಭಾಷೆ, ಅಂದರೆ ರಾಜ್ಯ ಭಾಷೆಯ ಪ್ರಾಧಾನ್ಯತೆಯನ್ನು ಹೆಚ್ಚಿಸುವಾಗ, ಉಳಿದವರ ಮಾತೃ ಭಾಷೆಯ ರಕ್ಷಣೆ ಮತ್ತು ಎಲ್ಲ ಮಾತೃ ಭಾಷೆಗಳಿಗೆ ಶೈಕ್ಷಣಿಕ ರಂಗದಲ್ಲಿ ಸಮಾನತೆ ದೊರೆಯುವಂತ ತತ್ವವನ್ನು ರೂಪಿಸಿಕೊಳ್ಳಬೇಕಾಗಿದೆ.

ರಾಜ್ಯದ ಪುನರ್ಸಂಘಟನೆಗೆ, ಏಕೀಕರಣಕ್ಕೆ ನಡೆದಿರುವ ಚಳುವಳಿಯು ಮುಂದೆ ಕನ್ನಡ ಭಾಷೆಗೆ ಆದರ ನಿಜವಾದ ಸ್ಥಾನ ದೊರೆಯುವಂತೆ ಮಾಡುವುದಕ್ಕಾಗಿಯೂ, ಭಾಷೆಯ ಅಭಿವೃದ್ಧಿಗಾಗಿಯೂ ಹೋರಾಟವಾಗಿ ಬೆಳೆಯಲಿಲ್ಲ. ಆದುದರಿಂದ ಭಾಷಾವಾರಾಗಿ ರಾಜ್ಯದ ಪುನರ್ಸಂಘಟನೆಯಾದ ಮೇಲೆಯೂ ರಾಜ್ಯ ಭಾಷೆಯು ಸಾಕಷ್ಟು ಅಭಿವೃದ್ಧಿಯಾಗಲಿಲ್ಲ ಅರ್ಥದಲ್ಲೆ ನಿಂತಿರುವ ಈ ಕಾರ್ಯವನ್ನು ಮುಂದೊಯ್ಯಬೇಕಾಗಿದೆ ಈ ಹಿನ್ನೆಲೆ ಮತ್ತು ದೃಷ್ಟಿಕೋಣದಿಂದ ಗೋಕಾಕ್ ವರದಿ ಶಿಫಾರಸಿನಿಂದಲಾಗಿ ಉದ್ಭವಿಸಿರುವ ಪರಿಸ್ಥಿತಿಯನ್ನು ನೋಡಬೇಕಾಗಿದೆ ಇತ್ತೀಚಿಗಿನ ವರ್ಷಗಳಲ್ಲಿ ಪ್ರಗತಿಪರ ಸಾಹಿತಿಗಳು, ಕಲಾಕಾರರು ಮತ್ತು ಎಡ ಸಂಘಟನೆಗಳು, ಅದರಲ್ಲೂ ನಮ್ಮವು ಹೆಚ್ಚು ಹೆಚ್ಚಾಗಿ ಈ ಪ್ರಶ್ನೆಗಳನ್ನು ಎತ್ತಿರುವುದು ಮತ್ತು ಕನ್ನಡದ ಆದ್ಯತೆಗಾಗಿ ಒತ್ತಾಯಿಸುತ್ತಾ ಬಂದಿರುವುದನ್ನು ಗಮನಿಸಬೇಕಿದೆ.

ಶೈಕ್ಷಣಿಕ ರಂಗದಲ್ಲಿ ಭಾಷೆಯ ಸ್ಥಾನಮಾನದ ಬಗ್ಗೆ ಪಕ್ಷದ ನಿಲುಮೆ :

"ಎಲ್ಲ ರಾಷ್ಟ್ರೀಯ ಭಾಷೆಗಳ ಸಮಾನತೆಯನ್ನು ಪಾರ್ಲಿಮೆಂಟಿನೊಳಗೂ, ಕೇಂದ್ರ ಆಡಳಿತದಲ್ಲೂ ಗುರುತಿಸಲಾಗುವುದು....ಆಡಳಿತದ ಎಲ್ಲ ಹಂತಗಳಲ್ಲೂ ಮತ್ತು ಶೈಕ್ಷಣಿಕ ಮಾಧ್ಯಮವಾಗಿ ಇಂಗ್ಲಿಷನ್ನು ಉಪಯೋಗಿಸುವುದನ್ನು ದೂರಮಾಡಿ, ಇಂಗ್ಲೀಷಿನ ಬದಲು ರಾಷ್ಟ್ರೀಯ ಭಾಷೆಗಳನ್ನು ಉಪಯೋಗಿಸಲಾಗುವುದು. ತಮ್ಮ ತಮ್ಮ ಮಾತೃಭಾಷೆಗಳಲ್ಲಿಯೇ ವಿದ್ಯಾಭ್ಯಾಸ ಪಡೆಯಲು ಶೈಕ್ಷಣಿಕ ಸಂಸ್ಥೆಗಳಲ್ಲಿ ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಲು ಜನತೆಗಿರುವ ಹಕ್ಕು, ಒಂದು ಭಾಷಾವಾರು ಪ್ರಾಂತ್ಯದ ರಾಷ್ಟ್ರೀಯ ಭಾಷೆಯನ್ನು ಸರಕಾರ ಮತ್ತು ಸಾರ್ವಜನಿಕ ಸಂಸ್ಥೆಗಳೂ ಸೇರಿದಂತೆ ಆಡಳಿತದ ಎಲ್ಲ ಹಂತಗಳಲ್ಲೂ ಆಡಳಿತ ಭಾಷೆಯನ್ನಾಗಿಯೂ, ರಾಜ್ಯದಲ್ಲಿ ಉನ್ನತ ವಿದ್ಯಾಭ್ಯಾಸದ ತನಕ ಅದನ್ನು ಶೈಕ್ಷಣಿಕ ಮಾಧ್ಯಮ ಭಾಷೆಯನ್ನಾಗಿಯೂ ಮಾಡುವುದು; ಅಗತ್ಯವಿದ್ದೆಡೆಗಳಲ್ಲಿ ರಾಜ್ಯ ಭಾಷೆಯೊಂದಿಗೆ ಅಲ್ಪ ಸಂಖ್ಯಾತ ಅಥವಾ ಅಲ್ಪ ಸಂಖ್ಯಾತ ಭಾಷೆಗಳ ಉಪಯೋಗಕ್ಕೂ ಅವಕಾಶವಿರುವುದು ....ಇವನ್ನು ಕಾರ್ಯಗತಗೊಳಿಸಲಾಗುವುದು. ಉರ್ದು ಭಾಷೆ ಮತ್ತು ಅಕ್ಷರಗಳಿಗೆ ರಕ್ಷಣೆ ಕೊಡಲಾಗುವುದು."

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮದಲ್ಲಿ "ಜನತಾ ಪ್ರಜಾ ಪ್ರಭುತ್ವ ಸರಕಾರ(PDF Govt)" ವು ಈ ಮೇಲಿನದ್ದನ್ನು ಕಾರ್ಯಗತಗೊಳಿಸುವುದಾಗಿ ಹೇಳಲಾಗಿದೆ. ಇದರಲ್ಲಿ ಗಮನಿಸತಕ್ಕ ವಿಷಯವೆಂದರೆ (1) ಇದು ದ್ವಿಭಾಷಾ ಸೂತ್ರವನ್ನು ಆಧರಿಸಿ ಇದೆ (2) ಇದು ಜನತಾ ಪ್ರಜಾಪ್ರಭುತ್ವ ಸರಕಾರವು ಅಧಿಕಾರಕ್ಕೆ ಬಂದಿರುವಾಗ ಕಾರ್ಯಗತಗೊಳಿಸುವುದಾಗಿದೆ (3) ಇದು ಕೇವಲ ಕೇಂದ್ರ ಸರಕಾರಕ್ಕೆ ಮಾತ್ರವೇ ಸೀಮಿತವಾಗಿಲ್ಲ; ಬದಲು ಭಾಷಾವಾರು ರಾಜ್ಯಗಳಲ್ಲಿ ಭಾಷೆಯ ಪ್ರಶ್ನೆಯನ್ನು ಹೇಗೆ ಎದುರಿಸುವೆವೂ ಎಂದಿದೆ (4) ಉರ್ದುವಿಗೆ ತನ್ನದೇ ಆದ ಭಾಷಾವಾರು ರಾಜ್ಯ ಇರದಿರುವುದರಿಂದ ಉರ್ದು ಭಾಷೆಯ ಬಗ್ಗೆ ವಿಶೇಷ ಗಮನ ಹರಿಸಲಾಗಿದೆ

ಪಕ್ಷದ ಕಾರ್ಯಕ್ರಮದಲ್ಲಿರುವುದರನ್ನು ಅರ್ಥೈಸುವಾಗ ಒಂದು ವಿಚಾರವಂತೂ ಸ್ಪಷ್ಟವಾಗುತ್ತದೆ. ಅದೇನೆಂದರೆ ಭಾಷಾವಾರು ರಾಜ್ಯಗಳಲ್ಲಿ ಆಡಳಿತ ಭಾಷೆಯು ರಾಜ್ಯ ಭಾಷೆಯಾಗಿರುವಾಗಲೇ ಮತ್ತು ಅದನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದರೊಂದಿಗೆ ಎಲ್ಲರ ಮಾತೃ ಭಾಷೆಗಳಲ್ಲಿ ಅವರವರಿಗೆ ಶಿಕ್ಷಣ ದೊರೆಯುವ ಹಕ್ಕು ದೊರೆಯಬೇಕು. ಅಂದರೆ ಶೈಕ್ಷಣಿಕ ರಂಗದಲ್ಲಿ ಎಲ್ಲ ರಾಷ್ಟ್ರೀಯ ಭಾಷೆಗಳಿಗೆ/ಮಾತೃ ಭಾಷೆಗಳಿಗೆ ಸಮಾನತೆ ಇರಬೇಕು ಎಂಬ ತತ್ವವು ಅಡಕವಾಗಿದೆ. ಮತ್ತು ಒಂದು ರಾಜ್ಯದಲ್ಲಿನ ರಾಷ್ಟ್ರ ಭಾಷೆಯು ಆಡಳಿತ ಭಾಷೆಯಾಗಿರುವುದರಿಂದ ಎಲ್ಲರೂ ಅದನ್ನು ಕಲಿಯಲು ಪ್ರೋತ್ಸಾಹ, ಒತ್ತಾಯ ಬರುವುದೆಂಬ ಅಂಶವೂ ಇದೆ. ಶಿಕ್ಷಣವು ಅವರವರ ಮಾತೃ ಭಾಷೆಯಲ್ಲೇ ದೊರೆಯಬೇಕೆಂಬುದು ವಿದ್ಯಾರ್ಜನೆಯ ದೃಷ್ಟಿಯಿಂದಲೂ, ತನ್ನ ಅಭಿವ್ಯಕ್ತಿಯನ್ನು ತೋರಿಸುವ ದೃಷ್ಟಿಯಿಂದಲೂ ಅತ್ಯಂತ ವೈಜ್ಞಾನಿಕವಾಗಿ ಇದೆ. ಅದುದರಿಂದ ಪಕ್ಷ ಮೇಲಿನಂತೆ ಹೇಳಿದೆ. ಒಂದು ರಾಜ್ಯದಲ್ಲಿ ಆ ರಾಜ್ಯದ ರಾಷ್ಟ್ರೀಯ ಭಾಷೆಯ ಪ್ರಾಧಾನ್ಯತೆಯನ್ನು ಬೆಳೆಸುವಾಗ ಶೈಕ್ಷಣಿಕ ರಂಗದಲ್ಲಿ ಎಲ್ಲ ರಾಷ್ಟ್ರೀಯ/ಮಾತೃ ಭಾಷೆಗಳ ಸಮಾನತೆಯನ್ನು ಕಾಯ್ದುಕೊಳ್ಳುವುದು ಅವಶ್ಯವಿದೆ. ಭಾರತ ದೇಶವು ಭಾಷಾವಾರು ರಾಜ್ಯಗಳ ಒಕ್ಕೂಟವಾಗಿರುವುದರಿಂದಲೂ, ಒಂದೊಂದು ರಾಜ್ಯದಲ್ಲಿ ನೆರೆಹೊರೆಯ ರಾಜ್ಯದ ಜನರು ಗಣನೀಯ ಪ್ರಮಾಣದಲ್ಲಿರುವುದರಿಂದಲೂ, ಕೇಂದ್ರ ಸರಕಾರಕ್ಕೆ ಸಂಬಂಧಿಸಿದ ಸಿಬ್ಬಂಧಿ, ನೌಕರ ವರ್ಗವು ರಾಷ್ಟ್ರದಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗಬೇಕಾಗಿರುವುದರಿಂದಲೂ ಭಾಷೆಯ ಪ್ರಶ್ನೆಗೆ ದೇಶಾದ್ಯಂತ ಒಂದೇ ಧೋರಣೆ ಇರುವುದೂ ಅವಶ್ಯವಿದೆ.

ಜನತಾ ಪ್ರಜಾಪ್ರಭುತ್ವ ಸರಕಾರದಡಿಯಲ್ಲಿ ಕಾರ್ಯಗತಗೊಳಿಸಬಹುದಾದ ಭಾಷೆಯ ಬಗೆಗಿನ ನಿಲುಮೆಗಳು ಸದ್ಯದ ಪರಿಸ್ಥಿತಿಯಲ್ಲಿ ಕೇವಲ ಪ್ರಚಾರದ ಘೋಷಣೆಗಳಾಗಬಲ್ಲುವೇ ಹೊರತು, ಕಾರ್ಯಗತವಾಗಲಾರದು. ಇಂದಿನ "ಬಂಡವಾಳಶಾಹಿ - ಭೂಮಾಲಿಕ" ಪ್ರಭುತ್ವ ಮತ್ತು ವ್ಯವಸ್ಥೆಯಲ್ಲಿ ಹೆಚ್ಚು ಕಡಿಮೆ ತ್ರಿಭಾಷಾ ಸೂತ್ರವೇ ಜಾರಿಯಲ್ಲಿದೆ. ಅಂದರೆ ರಾಜ್ಯ ಭಾಷೆ, ದೇಶದ ರಾಷ್ಟ್ರ ಭಾಷೆ, ಇಂಗ್ಲೀಷ್ ಭಾಷೆ (ಕೊಂಡಿ ಭಾಷೆ) ಇವು ಇಂದಿನ ವ್ಯವಸ್ಥೆ ಇರುವತನಕ ಉದ್ಯೋಗ ಮತ್ತು ಇನ್ನಿತರ ದೃಷ್ಟಿಯಿಂದ ಅವಶ್ಯವಿದೆ. ಸದ್ಯದ ಪರಿಸ್ಥಿತಿಯಲ್ಲಿ ತ್ರಿಭಾಷಾ ಸೂತ್ರದ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಭಾಷೆಗಳ ಬಗೆಗಿನ ತಾತ್ಕಾಲಿಕ ನಿಲುಮೆಗಳನ್ನು ತೆಗೆದುಕೊಳ್ಳುವುದು ಅವಶ್ಯವಿದೆ.

ಬೇರೆ ಬೇರೆ ರಾಜ್ಯಗಳಲ್ಲಿ ಹೇಗಿದೆ ?

ಶೈಕ್ಷಣಿಕ ರಂಗದಲ್ಲಿ, ಹೈಸ್ಕೂಲು ವಿದ್ಯಾಭ್ಯಾಸದತನಕ ಬೇರೆ ಬೇರೆ ರಾಜ್ಯಗಳಲ್ಲಿ ಹೇಗಿದೆ ಎಂದು ನೋಡೋಣ:

ಮಹಾರಾಷ್ಟ್ರ

ವಿದ್ಯಾರ್ಥಿಯು ಕಲಿಯುವ ಹಲವಾರು ಭಾಷೆಗಳು ವಿದ್ಯಾರ್ಥಿಯ ಶಿಕ್ಷಣ ಮಾಧ್ಯಮದ ಮೇಲೆ ಅವಲಂಬಿತವಾಗಿದೆ. ಮರಾಠಿ, ಹಿಂದಿ, ಉರ್ದು, ಇಂಗ್ಲೀಷ್, ಗುಜರಾತಿ, ಸಿಂಧಿ ಮತ್ತು ಕನ್ನಡ ಭಾಷೆಗಳಲ್ಲಿ ಶಿಕ್ಷಣ ಕೊಡಲು ವ್ಯವಸ್ಥೆಯಿದೆ. ವಿದ್ಯಾರ್ಥಿಯ ಶಿಕ್ಷಣ ಮಾಧ್ಯಮದ ಭಾಷೆಯೇ ಪ್ರಥಮ ಭಾಷೆಯಾಗುತ್ತದೆ. ದ್ವಿತೀಯ ಮತ್ತು ತೃತೀಯ ಭಾಷೆಗಳು ಮಾಧ್ಯಮದಿಂದ ಮಾಧ್ಯಮಕ್ಕೆ ವ್ಯತ್ಯಾಸವಾಗುತ್ತವೆ. ಮರಾಠಿ ಮಾಧ್ಯಮದ ವಿದ್ಯಾರ್ಥಿಯು ಮರಾಠಿ, ಹಿಂದಿ ಮತ್ತು ಇಂಗ್ಲೀಷ್ ಕಲಿತರೆ ಕನ್ನಡ ಮಾಧ್ಯಮದ ವಿದ್ಯಾರ್ಥಿಯು ಕನ್ನಡ, ಹಿಂದಿ ಮತ್ತು ಇಂಗ್ಲೀಷ್ ಕಲಿಯಬಹುದು. ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಯು ಇಂಗ್ಲೀಷ್, ಹಿಂದಿ ಮತ್ತು ಮಾತೃಭಾಷೆ ಕಲಿಯಬೇಕಾಗಿದೆ. ಎಲ್ಲ ಮೂರು ಭಾಷೆಗಳಿಗೂ ತಲಾ 100 ಅಂಕಗಳಿವೆ.

ಆಂಧ್ರ ಪ್ರದೇಶ:

ಇಲ್ಲಿ ತ್ರಿಭಾಷಾ ಸೂತ್ರದ ಪ್ರಕಾರ ಪ್ರಥಮ ಭಾಷೆಯಾಗಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ, ದ್ವಿತೀಯ ಭಾಷೆಯಾಗಿ ಹಿಂದಿ ಮತ್ತು ತೃತೀಯ ಭಾಷೆಯಾಗಿ ಇಂಗ್ಲೀಷ್ ಇವುಗಳನ್ನು ಕಲಿಸಲಾಗುತ್ತಿದೆ. ಎಲ್ಲಾ ಮೂರು ಭಾಷೆಗಳಿಗೆ 100 ರಂತೆ ಅಂಕಗಳಿವೆ.

ಕೇರಳ:

ಇಲ್ಲಿ ಪ್ರಥಮ ಭಾಷೆಯನ್ನು ಎರಡು ಭಾಗ ಮಾಡಲಾಗಿದೆ. ಮೊದಲನೇಯ ಭಾಗದಲ್ಲಿ ವಿದ್ಯಾರ್ಥಿಯು ಕೆಳಕಂಡ ಭಾಷೆಗಳಲ್ಲಿ ಒಂದನ್ನು ತೆಗೆದುಕೊಳ್ಳಬೇಕಾಗುತ್ತದೆ: ಮಲಯಾಳಂ, ತಮಿಳು, ಕನ್ನಡ, ಸಂಸ್ಕೃತ, ಅರಾಬಿಕ್,

ಗುಜರಾತಿ, ಉರ್ದು, ಫ್ರೆಂಚ್ ಅಥವಾ ಸಿರಿಯನ್; ಎರಡನೇ ಭಾಗದಲ್ಲೂ ಕೆಳಕಂಡ ಭಾಷೆಗಳಲ್ಲಿ ಒಂದನ್ನು ತೆಗೆದುಕೊಳ್ಳಬೇಗುತ್ತದೆ : ಮಲಯಾಳಂ, ತಮಿಳು, ಕನ್ನಡ, ವಿಶೇಷ ಇಂಗ್ಲೀಷ್ (ಇಂಗ್ಲೀಷ್ ಮಾಧ್ಯಮದ ವಿದ್ಯಾರ್ಥಿಗಳಿಗೆ). ಎಲ್ಲಾ ವಿದ್ಯಾರ್ಥಿಗಳೂ ಇಂಗ್ಲೀಷನ್ನು ದ್ವಿತೀಯ ಭಾಷೆ ಮತ್ತು ಹಿಂದಿಯನ್ನು ತೃತೀಯ ಭಾಷೆಯನ್ನಾಗಿ ಕಲಿಯಬೇಕಾಗುತ್ತದೆ.

ತಮಿಳುನಾಡು :

ಇಲ್ಲಿ ದ್ವಿಭಾಷಾ ಸೂತ್ರವನ್ನು ಅನುಸರಿಸಲಾಗುತ್ತಿದೆ. ಮಾತೃ ಭಾಷೆ ಅಥವಾ ಪ್ರಾದೇಶಿಕ ಭಾಷೆಯು ಪ್ರಥಮ ಭಾಷೆಯಾಗಿದೆ. ಪ್ರಥಮ ಭಾಷೆಯ ಪಟ್ಟಿಯಲ್ಲಿ ಸೇರಿರುವ ಭಾಷೆಗಳೆಂದರೆ: ತಮಿಳು, ತೆಲುಗು, ಕನ್ನಡ, ಹಿಂದಿ, ಗುಜರಾತಿ, ಉರ್ದು ಮತ್ತು ಮುನ್ನೂರು ಅಂಕಗಳಿರುವ ಈ ಭಾಷೆಗಳಲ್ಲಿ ತೇರ್ಗಡೆಯಾಗಲು ಶೇ. 30 ಅವಶ್ಯವಿದೆ.

ಕರ್ನಾಟಕದಲ್ಲಿ ಹೇಗಿತ್ತು ?

ಗೋಕಾಕ್ ವರದಿಯ ಮೊದಲಿನ ಬಗ್ಗೆ ಹೇಳುವುದಾದರೆ, ಕರ್ನಾಟಕ ಸರ್ಕಾರವು ಶಾಲಾ ಮಟ್ಟದಲ್ಲಿ ತ್ರಿಭಾಷಾ ಸೂತ್ರವನ್ನು ಅನುಸರಿಸುತ್ತಿದ್ದು, ಪ್ರಾಥಮಿಕ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಮಾತೃಭಾಷೆಯಲ್ಲಿ ನೀಡಲಾಗುತ್ತಿದೆ. ಪ್ರಾಥಮಿಕ ಮಟ್ಟದಲ್ಲಿ ಶಿಕ್ಷಣ ಮಾಧ್ಯಮವಾಗಿರುವ ಭಾಷೆಗಳೆಂದರೆ ಕನ್ನಡ, ತಮಿಳು, ತೆಲುಗು ಮರಾಠಿ, ಹಿಂದಿ, ಉರ್ದು, ಮಲಯಾಳಂ, ಗುಜರಾತಿ, ಸಿಂಧಿ ಮತ್ತು ಇಂಗ್ಲೀಷ್. ವಿದ್ಯಾರ್ಥಿಳು 5ನೇ ತರಗತಿ ತಲಪಿದಾಗ ಅವರು ದ್ವಿತೀಯ ಭಾಷೆಯಾಗಿ ಇಂಗ್ಲೀಷ್

ಕನ್ನಡ ಪ್ರಥಮ ಭಾಷೆಯಾಗಿರುವವರು ಹಿಂದಿಯನ್ನು ತೃತೀಯ ಭಾಷೆಯನ್ನಾಗಿ ಕಲಿಯಬೇಕು.

ಪ್ರಥಮ ಭಾಷೆ ಅಥವಾ ದ್ವಿತೀಯ ಭಾಷೆಯಾಗಿ ಕನ್ನಡ ಕಲಿಯಲೊಲ್ಲದವರು ತೃತೀಯ ಭಾಷೆಯಾಗಿ ಕನ್ನಡ ಕಲಿಯಬೇಕು.

ತೃತೀಯ ಭಾಷೆಯು ಪರೀಕ್ಷೆಗೆ ಒಂದು ಐಚ್ಛಿಕ ವಿಷಯವಾಗಿರುತ್ತದೆ.

ಬೇರೆ ಬೇರೆ ರಾಜ್ಯಗಳಲ್ಲಿನ ಪದ್ಧತಿಗೆ ಹೋಲಿಸಿ ನೋಡಿದಾಗ ಒಂದೆರಡು ಅಂಶಗಳು ಕಂಡು ಬರುತ್ತವೆ :

(1) ಬೇರಾವ ರಾಜ್ಯದಲ್ಲೂ ಇಲ್ಲದಿರುವ ಸ್ಥಾನವು, ಅಂದರೆ ಸಂಸ್ಕೃತಕ್ಕೆ ಪ್ರಥಮ ಭಾಷೆಯ ಸ್ಥಾನವು ಕರ್ನಾಟಕ ರಾಜ್ಯದಲ್ಲಿತ್ತು. (2) ಣಿಸಬೇಕಾಗಿತ್ತು. ಸಮಿತಿಯು ಹಾಗೆ ಮಾಡದಿರುವುದು ಸ್ಪಷ್ಟ ಮತ್ತು ತನ್ನ ವ್ಯಾಪ್ತಿಯನ್ನೂ ಮೀರಿದೆ ಎಂಬುದು ಸ್ಪಷ್ಟ. ಸಮಿತಿಯ ವರದಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವ ಆದೇಶ ಹೊರಡಿಸುವ ಮೊದಲು ಸರ್ಕಾರವಾದರೂ ಈ ಪ್ರಶ್ನೆಗಳನ್ನು ಪರಿಗಣಿಸಬೇಕಾಗಿತ್ತು. ಆದರೆ ಸರ್ಕಾರವೂ ಹಾಗೆ ಮಾಡಲಿಲ್ಲ.

ಗೋಕಾಕ್ ಸಮಿತಿ :

ದೇವರಾಜ ಅರಸು ಅವರ ಸರಕಾರವು 1979 ಅಕ್ಟೋಬರ್‌ನಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ, ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ತೆಗೆದು ಹಾಕಿತು. ಇದನ್ನು ಎಡ ಮತ್ತು ಎಲ್ಲಾ ಪ್ರಗತಿಪರ ಸಂಘಟನೆಗಳೂ, ವ್ಯಕ್ತಿಗಳೂ ಸ್ವಾಗತಿಸಿದರು. ಆದರೆ ಗುತ್ತದೆ. ಪ್ರದೇಶ, ಭಾಷೆ, ಸಂಸ್ಥೆಗಳ ಪ್ರತಿನಿಧಿಗಳನ್ನು ವ್ಯಾಪಕವಾಗಿ ಸಂದರ್ಶಿಸಿ, ಸಾಕಷ್ಟು ವಿಚಾರ ವಿಮರ್ಶೆಯನ್ನು ಸಮಿತಿಯು ನಡೆಸಿಲ್ಲ ಎಂಬುದೂ ಸ್ಪಷ್ಟವಿದೆ. ಗೋಕಾಕ್ ಸಮಿತಿ ವರದಿಯಲ್ಲಿ ಭಾಷೆಯ ಬಗ್ಗೆ ಸಂಕುಚಿತ, ಪ್ರಾದೇಶಿಕ ಮತ್ತು ಕೋಮು ಭಾವನೆಯನ್ನು ಕೆರಳಿಸುವಂತಹಾ ಅಂಶಗಳೂ ಇವೆ ಎಂಬುದು ಕಂಡುಬರುತ್ತದೆ. ಅವನ್ನು ತಪ್ಪಿಸುವುದು ಸಾಧ್ಯವಿತ್ತು. ಸರ್ಕಾರವೂ ಜಾಗರೂಕತೆಯಿಂದಲೂ, ಜವಾಬ್ದಾರಿಯಿಂದಲೂ ವರ್ತಿಸದ ಕಾರಣದಿಂದ ಗೊಂದಲ ಜಾಸ್ತಿಯಾಯಿತು.

ಸಂವಿಧಾನದ ವಿಧಿ :

29ನೇ ವಿಧಿ : (1) ಭಾರತದ ಪ್ರದೇಶ ಅಥವಾ ಅದರ ಯಾವುದೇ ಭಾಗದಲ್ಲಿ ವಾಸವಾಗಿದ್ದು, ತಮ್ಮದೇ

ಬೆಳವಣಿಗೆಗಳ ಬಗ್ಗೆ ವಿಮರ್ಶೆ ಮತ್ತು ಪಕ್ಷದ ನಿಲುಮೆ

ಮಲಯಾಳಂ. ಎಲ್ಲಾ ವಿದ್ಯಾರ್ಥಿಗಳೂ ದ್ವಿತೀಯ ಭಾಷೆಯಾಗಿ ಇಂಗ್ಲೀಷನ್ನು ಕಲಿಯಬೇಕಾಗಿದೆ. ಮೇಲ್ಕಂಡ ಎರಡು ಭಾಷೆಗಳಲ್ಲಿ ಪ್ರತಿಯೊಂದಕ್ಕೂ ವಾರಕ್ಕೆ 7 ಪೀರಿಯಡ್‌ಗಳಂತೆ ಕಲಿಸಲಾಗುತ್ತಿದ್ದು, ಅವುಗಳಿಗೆ ತಲಾ 100 ಅಂಕಗಳಿವೆ.

ಪಶ್ಚಿಮ ಬಂಗಾಳ :

ಪಶ್ಚಿಮ ಬಂಗಾಳದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಪ್ರಾದೇಶಿಕ ಭಾಷೆ ಅಥವಾ ಮಾತೃ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಕಲಿಸಲಾಗುತ್ತಿದೆ. ಆದರ ಪ್ರಕಾರ ಬಂಗಾಳಿ, ಇಂಗ್ಲೀಷ್, ನೇಪಾಳಿ, ಹಿಂದಿ, ಉರ್ದು, ಒರಿಯ ತೆಲುಗು, ಗುಜರಾತಿ ಇವುಗಳಲ್ಲಿ ಒಂದನ್ನು ಕಲಿಯಬೇಕು. ಇವುಗಳ ಜೊತೆಗೆ ಅಸ್ಸಾಮಿ, ಲುಷಾಯ್, ಮಲಯಾಳಂ, ಮರಾಠಿ, ಆಧುನಿಕ ಟಿಬೆಟನ್, ಸಂಚಾಲಿ, ಸಂತಾಲಿ ಮತ್ತು ತಮಿಳನ್ನು ಸಹ ಪ್ರಥಮ ಭಾಷೆಯಾಗಿ ಸೇರಿಸಲಾಗಿದೆ. ಮೊದಲು ಇಂಗ್ಲೀಷ್ ಭಾಷೆಯನ್ನು ದ್ವಿತೀಯ ಭಾಷೆಯಾಗಿ ಮೂರನೇ ತರಗತಿಯಿಂದಲೇ ಜಾರಿಗೆ ತರಲಾಗಿತ್ತು. ಎಡರಂಗ ಸರಕಾರ ಅದನ್ನು ಬದಲಾಯಿಸಿ, ಏಳನೆ ತರಗತಿಯಿಂದ ಬಳಕೆಗೆ ತಂದಿದೆ. ಇದಕ್ಕೆ ಸಾಕಷ್ಟು ವಿರೋಧವಿದ್ದರೂ ಸಹ ಪ್ರಾದೇಶಿಕ ಭಾಷಾ ಬೆಳವಣಿಗೆಯ ದೃಷ್ಟಿಯಿಂದ ಇದು ಉಚಿತ ಎಂಬುದು ಎಡರಂಗದ ನಿರ್ಧಾರ. ಬಹುತೇಕ ಹಿಂದಿಯನ್ನು ತೃತೀಯ ಭಾಷೆಯನ್ನಾಗಿ ಭೋಧಿಸಲಾಗುತ್ತಿದೆ (ಆರನೇ ತರಗತಿಯಿಂದ). ಆದರೆ ಹಿಂದಿಯ ಜೊತೆಗೆ ಅಸ್ಸಾಮಿ, ಬಂಗಾಳಿ, ಗುಜರಾತಿ, ಲುಷಾಯ್, ಮಲಯಾಳಂ, ತಮಿಳು, ಮರಾಠಿ, ನೇಪಾಳಿ, ಒರಿಯ, ಸದಾನಿ, ಸಂಚಾಲಿ, ತೆಲುಗು, ಉರ್ದು, ಪಾಲಿ ಭಾಷೆಗಳನ್ನು ಕಲಿಯಬಹುದು.

ತೆಗೆದುಕೊಳ್ಳಬೇಕಾಗುತ್ತದೆ. ಕನ್ನಡವಲ್ಲದ ಶಾಲೆಗಳಲ್ಲಿ ವಿದ್ಯಾರ್ಥಿಗಳು ಕನ್ನಡವನ್ನು 3ನೇ ತರಗತಿಯಿಂದ ಹೆಚ್ಚುವರಿ ಭಾಷೆಯಾಗಿ ಅಭ್ಯಸಿಸಬೇಕಾಗುತ್ತದೆ. ಇದು ಪರೀಕ್ಷೆಯ ವಿಷಯವಾಗಿರುವುದಿಲ್ಲ. 6ನೇ ತರಗತಿಯಿಂದ ಹಿಂದಿಯನ್ನು ತೃತೀಯ ಭಾಷೆಯನ್ನಾಗಿ ಕಲಿಸಲಾಗುತ್ತದೆ.

ಪ್ರೌಢ ಶಾಲಾ ಮಟ್ಟದ ಎಲ್ಲ ವಿದ್ಯಾರ್ಥಿಗಳೂ ಕೆಳಕಂಡ ಭಾಷೆಗಳಲ್ಲಿ ಒಂದನ್ನು ಪ್ರಥಮ ಭಾಷೆಯನ್ನಾಗಿ ತೆಗೆದುಕೊಳ್ಳಬೇಕೆಂದು ಹೇಳಲಾಗಿದೆ. ಆ ಭಾಷೆಗಳೆಂದರೆ : ಕನ್ನಡ, ತೆಲುಗು, ತಮಿಳು ಹಿಂದಿ, ಉರ್ದು, ಮರಾಠಿ, ಇಂಗ್ಲೀಷ್ ಮತ್ತು ಸಂಸ್ಕೃತ. ಪ್ರಥಮ ಭಾಷೆಯ ಬೋಧನೆಯು ವಾರಕ್ಕೆ 5 ಪೀರಿಯಡ್‌ಗಳಾಗಿರುತ್ತದೆ ಹಾಗೂ ಅದಕ್ಕೆ 150 ಅಂಕಗಳಿರುತ್ತವೆ (ಪ್ರಥಮ ಪತ್ರಿಕೆ 100, ದ್ವಿತೀಯ ಪತ್ರಿಕೆ 50 ಅಂಕಗಳು). ಅಥವಾ,

ಕೆಳಕಂಡ ಭಾಷೆಗಳಲ್ಲಿ ಒಂದು ಭಾಷೆಯ ಕಾಂಪೋಸಿಟ್ ಕೋರ್ಸ್; ಹಿಂದಿ, ಉರ್ದು, ತಮಿಳು, ತೆಲುಗು, ಮರಾಠಿ (ವಾರಕ್ಕೆ 3 ಪೀರಿಯಡ್–100 ಅಂಕಗಳು) ಹಾಗೂ ಸಂಸ್ಕೃತ, ಅರಾಬಿಕ್, ಹಿಂದಿ ಮತ್ತು ಪರ್ಶಿಯನ್ (ವಾರಕ್ಕೆ 2 ಪೀರಿಯಡ್–50 ಅಂಕಗಳು).

ಪ್ರಥಮ ಭಾಷೆಯಾಗಿ ಇಂಗ್ಲೀಷ್ ಕಲಿಯುವವರು ಕೆಳಕಂಡ ಭಾಷೆಗಳಲ್ಲಿ ಒಂದನ್ನು ದ್ವಿತೀಯ ಭಾಷೆಯಾಗಿ ಕಲಿಯಬೇಕು : ಕನ್ನಡ, ಹಿಂದಿ, ಉರ್ದು, ತಮಿಳು, ತೆಲುಗು ಮತ್ತು ಮರಾಠಿ. ಇಂಗ್ಲೀಷ್ ಪ್ರಥಮ ಭಾಷೆಯಾಗಿಲ್ಲದವರು ಅದನ್ನು ದ್ವಿತೀಯ ಭಾಷೆಯಾಗಿ ಕಲಿಯಬೇಕು.

ಕನ್ನಡಕ್ಕೆ ಸಲ್ಲತಕ್ಕ ಪ್ರಾಧಾನ್ಯತೆ ಇಲ್ಲವೆಂಬುದು ಸ್ಪಷ್ಟವಿದೆ. ಅದನ್ನು ಪರೀಕ್ಷೆಯ ವಿಷಯವೂ ಅಲ್ಲದ ಮೂರನೇ ಸ್ಥಾನಕ್ಕೆ ತಳ್ಳುವ ಹಾಗೂ ಕಾರ್ಯತಃ ಕಲಿಯದೇ ಬಿಡುವ ಅವಕಾಶ ಇಲ್ಲಿದೆ.

ಇದನ್ನು ಬದಲು ಮಾಡಲು ಇಷ್ಟು ಕಾಲವೂ ಸರಕಾರ ಯಾವುದೇ ಕ್ರಮ ವಹಿಸಲಿಲ್ಲ. ಇದನ್ನು ಸಮಗ್ರವಾಗಿ ಬದಲಾವಣೆ ಮಾಡುವ ಉದ್ದೇಶವೂ ಗೋಕಾಕ್ ಸಮಿತಿಯನ್ನು ನೇಮಿಸುವಾಗ ಸರ್ಕಾರಕ್ಕೆ ಇದ್ದಿಲ್ಲ ಎನ್ನುವುದು ಆ ಸಮಿತಿಗೆ ಸರ್ಕಾರ ಒಪ್ಪಿಸಿದ್ದ ವಿಷಯಗಳ ವ್ಯಾಪ್ತಿಯನ್ನು ನೋಡಿದರೆ ಗೊತ್ತಾಗುತ್ತದೆ. ಗೋಕಾಕ್ ಸಮಿತಿಯ ವ್ಯಾಪ್ತಿ ಹೀಗಿದೆ :

(1) ಶಾಲಾ ಪಠ್ಯ ವಸ್ತುವಿನಲ್ಲಿ ಸಂಸ್ಕೃತ ಅಭ್ಯಾಸ ವಿಷಯವಾಗಿ ಉಳಿಯಬೇಕೇ ?

(2) ಉಳಿಯಬೇಕಾದರೆ, ಕನ್ನಡಕ್ಕೆ ಪರ್ಯಾಯ ಭಾಷೆಯಾಗದೆ ಉಳಿಸುವುದು ಹೇಗೆ ?

(3) ತ್ರಿಭಾಷಾ ಸೂತ್ರದಂತೆ ಕನ್ನಡವನ್ನು ಕಡ್ಡಾಯ ಮಾಡಿ, ಉಳಿದೆರಡು ಭಾಷೆಗಳ ಆಯ್ಕೆಯ ಸ್ವಾತಂತ್ರ್ಯವನ್ನು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಬಿಡುವುದು ಸೂಕ್ತವೇ ?

ಗೋಕಾಕ್ ಸಮಿತಿಯು ಅದಕ್ಕೆ ಒಪ್ಪಿಸಲ್ಪಟ್ಟಿದ್ದ ಸೀಮಿತ ಪರಿಧಿಯಿಂದ ಹೊರಗೆ ಹೋಗಿ, ಭಾಷಾ ಶಿಕ್ಷಣದ ಕ್ರಮವನ್ನು ಸಮಗ್ರವಾಗಿ ಬದಲಾವಣೆ ಮಾಡುವ ಸಲಹೆಯನ್ನು ನೀಡುವಾಗ, ಇದಕ್ಕೆ ಸಂಬಂಧಿಸಿದ ಸಂವಿಧಾನಾತ್ಮಕ ಮತ್ತು ವ್ಯಾವಹಾರಿಕ ಹಾಗೂ ಪ್ರಾಯೋಗಿಕ ಪ್ರಶ್ನೆಗಳನ್ನು ಪರಿಗ

ಗುಂಡೂರಾವ್ ಸರಕಾರವು ಅಸ್ತಿತ್ವಕ್ಕೆ ಬಂದ ಮೇಲೆ ಮತ್ತೆ ಸಂಸ್ಕೃತಕ್ಕೆ ಪ್ರಥಮ ಭಾಷೆಯ ಸ್ಥಾನ ನೀಡಲು ಆದೇಶ ಹೊರಡಿಸಲಾಯಿತು. ಈ ಕ್ರಮದ ವಿರುದ್ಧ ಪ್ರಗತಿಪರ ಸಂಘಟನೆ, ವ್ಯಕ್ತಿಗಳಿಂದ ವ್ಯಾಪಕ ಪ್ರತಿರೋಧ ಕಂಡು ಬಂತು. ಈ ಸಂದರ್ಭದಲ್ಲಿ, ಸಂಸ್ಕೃತಕ್ಕೆ ಹೈಸ್ಕೂಲು ವಿದ್ಯಾಭ್ಯಾಸದ ಮಟ್ಟದಲ್ಲಿರುವ ಸ್ಥಾನದ ಕುರಿತು ಉಂಟಾದ ವಿವಾದವನ್ನು ಅಂದರೆ 1979 ಅಕ್ಟೋಬರಿನ ಸರ್ಕಾರಿ ಆಜ್ಞೆಯಿಂದಲಾಗಿ ಉದ್ಭವಿಸಿರುವ ವಿವಾದವನ್ನು ತಜ್ಞರ ಸಮಿತಿಗೆ ವಹಿಸಲು ನಿರ್ಧರಿಸಿ, 1980 ಜುಲೈ 5 ರಂದು ಗುಂಡೂರಾವ್ ಸರಕಾರವು ಆದೇಶ ಹೊರಡಿಸಿ ಗೋಕಾಕ್ ಸಮಿತಿಯನ್ನು ರಚಿಸಿತು.

(ಈಗ ಗೋಕಾಕ್ ವರದಿ ಶಿಫಾರಸುಗಳ ಚಾಚೂ ತಪ್ಪದಂತೆ ಜಾರಿಯಾಗಬೇಕೆಂದು ಹೋರಾಡಿದ ಅನೇಕ ಪ್ರಮುಖರು ಗೋಕಾಕ್ ಸಮಿತಿಗೆ ಬಹಿಷ್ಕಾರ ಹಾಕಿರುವುದನ್ನೂ, ಹಾಗೆಯೇ ವರದಿಯ ಶಿಫಾರಸುಗಳು ಚಾಚೂ ತಪ್ಪದಂತೆ ಜಾರಿಯಾಗಬೇಕೆಂದಿರುವ ಕೆಲವು ಪ್ರಮುಖರು ಶಿಫಾರಸಿನಲ್ಲಿ ಸಂಸ್ಕೃತಕ್ಕೆ ಪ್ರಥಮ ಭಾಷೆಯ ಸ್ಥಾನ ಕೊಡದಿರುವುದನ್ನು ಖಂಡಿಸಿರುವುದನ್ನೂ ಇಲ್ಲಿ ಸ್ಮರಿಸಿಕೊಳ್ಳಬೇಕು).

ಗೋಕಾಕ್ ಸಮಿತಿಯ ಇನ್ನೊಂದು ಇತಿಮಿತಿ ಎಂದರೆ, ಸಮಿತಿಯ ಸದಸ್ಯ ವರ್ಗವನ್ನು ನೋಡಿದರೆ ಅದರಲ್ಲಿ ಕೇವಲ ಕನ್ನಡ ಮತ್ತು ಸಂಸ್ಕೃತಕ್ಕೆ ಮಾತ್ರ ಪ್ರಾತಿನಿಧ್ಯವಿದೆಯೇ ಹೊರತು, ಉಳಿದ ಭಾಷೆಗಳಿಗೆ ಇಲ್ಲ ಎಂಬುದು ಸ್ಪಷ್ಟ. ಸಂಸ್ಕೃತಕ್ಕೆ ಸಂಬಂಧಿಸಿದ ಸೀಮಿತ ವಿಷಯವು ಮಾತ್ರ ಸಮಿತಿಯ ವ್ಯಾಪ್ತಿಯಲ್ಲಿತ್ತೆಂಬುದು ಇದರಿಂದ ಸ್ಪಷ್ಟವಾ

ಆದ ವಿಶಿಷ್ಟ ಭಾಷೆ, ಲಿಪಿ ಅಥವಾ ಸಂಸ್ಕೃತಿ ಹೊಂದಿರುವ ನಾಗರಿಕರ ಯಾವುದೇ ವಿಭಾಗವು ಅವುಗಳನ್ನು ಉಳಿಸಿಕೊಳ್ಳುವ ಹಕ್ಕನ್ನು ಪಡೆದಿರುತ್ತದೆ.

(2) ರಾಜ್ಯದ ನಿರ್ವಹಣೆಯಲ್ಲಿರುವ ಅಥವಾ ರಾಜ್ಯದ ಬೊಕ್ಕಸದಿಂದ ಧನ ಸಹಾಯ ಪಡೆಯುತ್ತಿರುವ ಯಾವುದೇ ವಿದ್ಯಾ ಸಂಸ್ಥೆಯಲ್ಲಾಗಲೀ, ಜಾತಿ, ಕುಲ, ಧರ್ಮ, ಭಾಷೆಗಳ ಆಧಾರ ಕೊಟ್ಟು ಯಾವುದೇ ನಾಗರಿಕನಿಗೂ ಪ್ರವೇಶವನ್ನು ನಿರಾಕರಿಸಲಾಗದು.

360–ಎ. ವಿಧಿ : ಭಾಷಾ ಅಲ್ಪಸಂಖ್ಯಾತ ಪಂಗಡಗಳವರ ಮಕ್ಕಳಿಗೆ ಅವರ ಮಾತೃ ಭಾಷೆಯಲ್ಲಿ ಪ್ರಾಥಮಿಕ ಮಟ್ಟದಲ್ಲಿ ಶಿಕ್ಷಣ ಕೊಡಲು, ಸೂಕ್ತ ಸೌಲಭ್ಯಗಳನ್ನು ಕೊಡಲು ಪ್ರತಿ ರಾಜ್ಯ ಅಥವಾ ಸ್ಥಳೀಯ ಪ್ರಾಧಿಕಾರವು ಯತ್ನಿಸಬೇಕಾಗಿದೆ.

ಗೋಕಾಕ್ ಸಮಿತಿ ಶಿಫಾರಸು :

ಸಮಿತಿಯ ಶಿಫಾರಸಿನ ಮುಖ್ಯಾಂಶ ಹೀಗಿದೆ :

(1) 1981–82ನೆಯ ಶೈಕ್ಷಣಿಕ ವರ್ಷದಿಂದಲೇ ಕನ್ನಡವನ್ನು ಏಕಮಾತ್ರ ಪ್ರಥಮ ಭಾಷೆಯನ್ನಾಗಿ ಮಾಡಿ, ಅದರ ಅಭ್ಯಾಸ ಕಡ್ಡಾಯವಾಗಬೇಕು. ಅದಕ್ಕೆ 150 ಅಂಕಗಳಿರಬೇಕು.

(2) ಈ ಕೆಳಕಂಡ ಭಾಷೆಗಳಲ್ಲಿ ಒಂದನ್ನು 100 ಅಂಕಗಳನ್ನು ಹೊಂದಿರುವ ದ್ವಿತೀಯ ಭಾಷೆಯನ್ನಾಗಿ ಕಲಿಯಬಹುದು :– ಅವೆಂದರೆ ಆಧುನಿಕ ಭಾರತೀಯ ಭಾಷೆಗಳಾದ ತಮಿಳು,

(6ನೇ ಪುಟ ನೋಡಿ)

ಗೋಕಾಕ್ ವರದಿ ಕುರಿತು……

(5ನೇ ಪುಟದಿಂದ)

ತೆಲುಗು, ಮಲಯಾಳಂ, ಮರಾಠಿ, ಗುಜರಾತಿ, ಹಿಂದಿ, ಉರ್ದು ಇವುಗಳಲ್ಲಿ ಒಂದು ಅಥವಾ ಇಂಗ್ಲೀಷ್ ಅಥವಾ ಪುರಾತನ ಭಾಷೆಗಳಾದ ಸಂಸ್ಕೃತ, ಅರೇಬಿಕ್, ಪರ್ಶಿಯನ್, ಲ್ಯಾಟಿನ್, ಗ್ರೀಕ್ ಇವುಗಳಲ್ಲೊಂದು.

(3) ತೃತೀಯ ಭಾಷೆಗೆ 50 ಅಂಕಗಳಿರಬೇಕು. ಮೇಲ್ಕಂಡ ಪಟ್ಟಿಯಲ್ಲಿ ದ್ವಿತೀಯ ಭಾಷೆಯಾಗಿರುವ ಭಾಷೆಯನ್ನು ಬಿಟ್ಟು ಎರಡನೇ ಪಟ್ಟಿಯಲ್ಲಿರುವ ಯಾವುದೇ ಭಾಷೆಯನ್ನಾದರೂ ತೃತೀಯ ಭಾಷೆಯನ್ನಾಗಿ ತೆಗೆದುಕೊಳ್ಳಬಹುದು. ತೃತೀಯ ಭಾಷೆಯು ಪರೀಕ್ಷೆಗೆ ಕಡ್ಡಾಯ ವಿಷಯವಾಗಿರುತ್ತದೆ.

ಮೊದಲನೇ ಶಿಫಾರಸ್ಸನ್ನು ಜಾರಿಗೆ ಮಾಡುವುದನ್ನು 1981–82ನೇ ಇಸವಿಯಿಂದಲೇ ಪ್ರಾರಂಭಿಸಿ 81–82ನೇಯ ಸಾಲಿನಲ್ಲಿ 3ನೇ ಇಯತ್ತೆಯಲ್ಲಿ ಕನ್ನಡವನ್ನು ಕಡ್ಡಾಯ ವಿಷಯವನ್ನಾಗಿ ಮಾಡಿ 86-87ಕ್ಕಾಗುವಾಗ 8ನೇಯ ಇಯತ್ತೆಯಲ್ಲೂ ಕಡ್ಡಾಯವಾಗುವುದು. 86-87ಕ್ಕಾಗುವಾಗ ಎಲ್ಲಾ ಹಂತದಲ್ಲೂ (ಪ್ರಾಥಮಿಕ ಮಟ್ಟದಿಂದ ಪ್ರೌಢ ವಿದ್ಯಾಭ್ಯಾಸದ ಹಂತದವರೆಗೆ) ಇದು ಜಾರಿಗೆ ಬರುವುದು. ಈ ತನಕ ಕನ್ನಡವನ್ನು ಕಲಿಯದವರಿಗೆ, ಅದನ್ನು ಕಲಿಸಲು ವಿಶೇಷ ವ್ಯವಸ್ಥೆ-ತಾತ್ಕಾಲೀಕ ವ್ಯವಸ್ಥೆಗಳನ್ನು ಸೂಚಿಸಲಾಗಿದೆ.

ಚಳುವಳಿಯ ಹಿನ್ನೆಲೆ ಉದ್ಭವಿಸಿರುವ ಪರಿಸ್ಥಿತಿ:

1982ನೇ ಇಸವಿ ಜನವರಿಯಲ್ಲಿ ಗೋಕಾಕ್ ವರದಿ ಶಿಫಾರಸ್ಸನ್ನು ಸರಕಾರವು ಒಪ್ಪಿಕೊಂಡಿರುವುದಾಗಿಯೂ, ಅದನ್ನು ಜಾರಿಗೊಳಿಸುವುದಾಗಿಯೂ ಸಾರಿತು. ಆಗ ಉರ್ದು ಮಾತನಾಡುವ ಮುಸ್ಲಿಮರಿಂದ ರಾಜ್ಯದ ನಾನಾ ಕಡೆ ಪ್ರತಿಭಟನೆ ಕಂಡು ಬಂತು. ಬೆಂಗಳೂರಿನಂತಲ್ಲಿ ತಮಿಳು ಮಾತನಾಡುವವರಿಂದಲೂ ಪ್ರತಿಭಟನೆ ಕಂಡು ಬಂತು. ಸಮಿತಿಯ ಶಿಫಾರಸ್ಸನ್ನು ಜಾರಿಗೊಳಿಸಿದರೆ ಅಲ್ಪ ಸಂಖ್ಯಾತ ಭಾಷೆಗಳಿಗೆ, ಉರ್ದುವಿಗೆ ಧಕ್ಕೆಯಾಗುವುದೆಂಬ ಮಾತು ಕೇಳಿ ಬಂತು. ಅಲ್ಪ ಸಂಖ್ಯಾತರಿಂದ ವ್ಯಾಪಕವಾಗಿ ಕಂಡು ಬಂದ ಈ ಪ್ರತಿಭಟನೆಯ ಹಿಂದೆ ಕಾಂಗ್ರೆಯ ರಾಜಕೀಯವೂ, ಮತೀಯ ಶಕ್ತಿಗಳ ಕೈವಾಡವೂ ಇತ್ತು. ಅಲ್ಪ ಸಂಖ್ಯಾತರ ಪ್ರತಿಭಟನೆಯಲ್ಲಿ ಕೋಮು ಘೋಷಣೆಗಳೂ ಅಲ್ಲಲ್ಲಿ ಕೇಳಬಂದುವು.

ಶಿಫಾರಸ್ಸನ್ನು ಜಾರಿ ಮಾಡುವುದಾಗಿ ಘೋಷಿಸಿದ್ದ ಗುಂಡೂರಾವ್ ಸರಕಾರವು ಮತ್ತೆ ಹಿಂದೇಟು ಹಾಕಿತು. ಇದರಿಂದಲಾಗಿ ಗೋಕಾಕ್ ಸಮಿತಿ ಶಿಫಾರಸ್ಸನ್ನು ಜಾರಿ ಮಾಡಬೇಕೆಂದು ಒತ್ತಾಯಿಸುತ್ತಿದ್ದ ವಿಭಾಗದ ಜನರ ಬೇಡಿಕೆ ಮತ್ತು ಚಳುವಳಿಗೆ ಪುಷ್ಟಿ ದೊರೆತಂತಾಯಿತು. ಮತೀಯ, ಕೋಮು ಹಾಗೂ ಕೆಲವು ಸ್ಥಾಪಿತ ಹಿತಾಸಕ್ತಿಗಳೂ, ರಾಜಕೀಯವೂ ಸೇರಿ ಗೋಕಾಕ್ ವರದಿ ಶಿಫಾರಸ್ಸನ್ನು ಚಾಚೂ ತಪ್ಪದಂತೆ ಜಾರಿಗೊಳಿಸಬೇಕೆಂಬ ಚಳುವಳಿ ಬೆಳೆಯಿತು. ವ್ಯಾಪಕವಾಗಿ ಬೆಳೆಯುತ್ತಲಿದೆ ಎಂಬ ಪತ್ರಿಕಾ ಪ್ರಚಾರ ದೊರೆತರೂ, ಮುಖ್ಯವಾಗಿ ಧಾರವಾಡ ಮತ್ತು ಕೆಲವು ಸಮೀಪದ ಪಟ್ಟಣಗಳಲ್ಲೂ, ಬೆಂಗಳೂರಿನಲ್ಲೂ, ಮೈಸೂರಿನಲ್ಲೂ – ಹೀಗೆ ಕೆಲವೆಡೆಗಳಲ್ಲಿ ಚಳುವಳಿ ನಡೆಯಿತು. ಈ ಸಂದರ್ಭದಲ್ಲಿ ಎಡ ಪಕ್ಷಗಳು, ಮುಖ್ಯವಾಗಿ ಸಿ ಪಿ ಐ ಮತ್ತು ಸಿ.ಪಿ.ಐ.(ಎಂ)ಗಳು ತೆಗೆದುಕೊಂಡ ನಿಲುವೆಯಿಂದಲಾಗಿ ಕೆಲವೊಂದು ಸಾಹಿತಿ/ಕಲಾವಿದರನ್ನು ಬಿಟ್ಟರೆ, ಎಡ ಪಕ್ಷಗಳ/ನಮ್ಮ ಬೆಂಬಲಿಗರು ಚಳುವಳಿಯು ದಿಕ್ಕು ತಪ್ಪುತ್ತಲಿದೆ ಎಂದು ಅರಿತುಕೊಂಡು ಅದಕ್ಕೆ ಸರಿಯಾದ ತಿರುವು ನೀಡಲು ಅಲ್ಲಲ್ಲಿ ಸ್ವಲ್ಪ ಮಟ್ಟಿಗೆ ಪ್ರಯತ್ನಿಸಿದರು. ಬೆಂಗಳೂರಿನಲ್ಲಿ ನಮ್ಮ ಪಕ್ಷವು ಗೋಕಾಕ್ ಸಮಿತಿ ವರದಿಯು ಸೂಕ್ತ ಬದಲಾವಣೆಯೊಂದಿಗೆ ಜಾರಿಯಾಗಬೇಕೆಂದು ಒತ್ತಾಯಿಸಿ ಕಾರ್ಯಕ್ರಮ ಹಾಕಿ ಕೆಲವು ಮಂದಿ ಬಂಧನಕ್ಕೊಳಗಾದರು. ತುಮಕೂರಿನಲ್ಲಿ ನಮ್ಮವರು ಭಾಗವಹಿಸುವಿಕೆಯಿಂದ ಚಳುವಳಿ ದಿಕ್ಕು ತಪ್ಪುವುದನ್ನು ತಪ್ಪಿಸಲಾಯ್ತು. ಆದೇನೇ ಇದ್ದರೂ ನಮ್ಮ ಭಾಗವಹಿಸುವಿಕೆ ಅಲ್ಪ ಸ್ವಲ್ಪವಾಗಿತ್ತು.

ಒಟ್ಟಾರೆ ಚಳುವಳಿಯು ಕ್ಷೀಣಿಸುತ್ತಿದ್ದಂತೆ ಕಾಣುತ್ತಿದ್ದ ಈ ಸಂದರ್ಭದಲ್ಲಿ ಕನ್ನಡದ ಜನಪ್ರಿಯ ನಟ ಡಾ॥ ರಾಜಕುಮಾರ್ ಅವರ ಭಾಗವಹಿಸುವಿಕೆಯಿಂದಲಾಗಿ ಚಳುವಳಿಗೆ ಮತ್ತೆ ಹೊಸ ಸ್ಫೂರ್ತಿ, ಜೀವಕಳೆ ತುಂಬಿ ಬಂತು. ಉಳಿದ ಚಿತ್ರ ಕಲಾವಿದರದ್ದು ಬೆಂಬಲ ದೊರೆತಿತು. ಏಪ್ರಿಲ್ 17 ರಂದು ಬೆಂಗಳೂರಿನಲ್ಲಿ ಡಾ. ರಾಜಕುಮಾರ್ ನೇತೃತ್ವದಲ್ಲಿ ಮೆರವಣಿಗೆ ನಡೆದಾಗ ಲಾಠಿ ಚಾರ್ಜು, ಅಶ್ರುವಾಯು ಸಿಡಿತ ನಡೆಯಿತು. 18 ರಂದು ಮೈಸೂರಿನಲ್ಲಿ ಮೆರವಣಿಗೆ ನಡೆಯಿತು. ಏಪ್ರಿಲ್ 19 ರಂದು ರಾಜ್ಯ ಸರಕಾರವು ಗೋಕಾಕ್ ಸಮಿತಿ ಶಿಫಾರಸ್ಸಿನ ತಿದ್ದುಪಡಿಗಳೊಂದಿಗೆ ಅದನ್ನು ಜಾರಿ ಮಾಡುವುದಾಗಿ ಘೋಷಿಸಿತು. ಚಳುವಳಿಗಾರರನ್ನಾಗಲೀ, ಭಾಷಾ ಪ್ರತಿನಿಧಿಗಳನ್ನಾಗಲಿ, ಶೈಕ್ಷಣಿಕ ಪರಿಣತರನ್ನಾಗಲೀ, ರಾಜಕೀಯ ಪಕ್ಷದ ಪ್ರತಿನಿಧಿಗಳನ್ನಾಗಲೀ ಸೇರಿಸಿ, ಸರಕಾರವು ಸರಳ ಮತ್ತು ಹೆಚ್ಚು ಸೂಕ್ತವಾದ ನಿರ್ಣಯಕ್ಕೆ ಬರಲು ಪ್ರಯತ್ನಿಸಲೇ ಇಲ್ಲ.

ಸರಕಾರದ ಏಪ್ರಿಲ್ 19ರ ನಿರ್ಣಯದ ಪ್ರಕಾರ ಸಂಸ್ಕೃತವು ಪ್ರಥಮ ಭಾಷೆಯಾಗಿರುವುದಿಲ್ಲ. ಮಾತೃ ಭಾಷೆಗಳು ಪ್ರಥಮ ಭಾಷೆಯದ್ದಾಗಿ 150 ಅಂಕಗಳಿರುತ್ತದೆ. ಕನ್ನಡ ಮಾತೃ ಭಾಷೆಯಲ್ಲದಿದ್ದು ಪ್ರಥಮ ಭಾಷೆ ಆಗದವರು ನೂರು ಅಂಕಗಳಿರುವ ಎರಡನೆ ಭಾಷೆಯನ್ನಾಗಿ ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕು. ತೃತೀಯ ಭಾಷೆಗೂ 100 ಅಂಕಗಳಿದ್ದು, ಅದೂ ಪರೀಕ್ಷೆಗೆ ಕಡ್ಡಾಯವಾಗಿರಬೇಕು. ಸರಕಾರದ ಈ ನಿರ್ಣಯದ ಪ್ರಕಾರ ಭಾಷೆಗಳಿಗೆ ಒಟ್ಟು ಇದ್ದ 300 ಅಂಕಗಳನ್ನು 350ಕ್ಕೇರಿಸಲಾಯ್ತು. ಎಲ್ಲ ಭಾಷಿಗರಿಗೂ ಭಾಷೆಗಳಲ್ಲಿ ಸರಿಸಮಾನವಾಗಿ ಅಂಕಗಳ ವಿತರಣೆಯಾಯಿತು. ಅಲ್ಪ ಸಂಖ್ಯಾತ ವಿಭಾಗದವರೂ, ಎಡ ಪಕ್ಷಗಳೂ, ಕೆಲವು ಪ್ರಮುಖ ಸಾಹಿತಿಗಳೂ ಸರಕಾರದ ಈ ತೀರ್ಮಾನದ ತಿರುಳು ಸೂಕ್ತವಿದೆ ಎಂದರು. ನಮ್ಮ ಪಕ್ಷವೂ ಸೇರಿದಂತೆ ಕೆಲವರು ಈ ಸೂತ್ರದ ತತ್ವ ಸರಿ ಇದೆಯಾದರೂ ಅಂಕಗಳ ವಿಚಾರದಲ್ಲಿ ಇನ್ನೂ ಸರಳ ಸೂತ್ರಬೇಕಾಗಿದೆ ಎಂದರು

ವರದಿಯನ್ನು ಚಾಚೂ ತಪ್ಪದೆ ಜಾರಿ ಮಾಡಬೇಕೆಂದು ಒತ್ತಾಯಿಸುತ್ತಿದ್ದ ಕನ್ನಡಪರ ಚಳುವಳಿಯು ಬೆಂಗಳೂರು ಮೈಸೂರಿನಂತಲ್ಲಿ ತಟಸ್ಥವಾಗುವ ಲಕ್ಷಣಗಳು ಕಂಡು ಬಂದುವು. ಧಾರವಾಡ ಕೇಂದ್ರವಾಗಿದ್ದ ಅಖಿಲ ಕರ್ನಾಟಕ ಕ್ರಿಯಾ ಸಮಿತಿಯು ಚಳುವಳಿಯನ್ನು ಮುಂದೊಯ್ಯಲು ಪ್ರಯತ್ನಿಸಿತು. ಮಠಾಧಿಪತಿಗಳಿಂದ ಹಿಡಿದು, ಕೆಲವು ರಾಜಕೀಯ ಶಕ್ತಿಗಳೂ ಇದರಲ್ಲಿ ಸೇರಿಕೊಂಡುವು. ಚಿತ್ರ ನಟರುಗಳ ಭಾಗವಹಿಸುವಿಕೆಯಿಂದ, ಮುಖ್ಯವಾಗಿ ಡಾ. ರಾಜಕುಮಾರರ ಭಾಗವಹಿಸುವಿಕೆಯಿಂದ ಜನ ಸೇರಿಸುವುದು ಮತ್ತು ಪ್ರಚಾರ ಗಿಟ್ಟಿಸುವುದರ ಮೂಲಕ ಚಳುವಳಿಗೆ ಮತ್ತೆ ಜೀವ ತುಂಬಲಾಯಿತು. ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಗದಗ, ದಾವಣಗೆರೆ, ಬಳ್ಳಾರಿ, ಬೆಂಗಳೂರು, ಮೈಸೂರು, ಮಂಡ್ಯಗಳಲ್ಲಿ ರಾಜಕುಮಾರ್ ಅವರ ನೇತೃತ್ವದಲ್ಲಿ ಜಾಥಾ ನಡೆಯಿತು ಮೇ 17 ರಂದು ಬೃಹತ್ ರ್ಯಾಲಿಯೊಂದಿಗೆ ಬೆಂಗಳೂರಿನಲ್ಲಿ ಜಾಥಾ ಕೊನೆಗೊಂಡಿತು. ಧಾರವಾಡ, ಬೆಂಗಳೂರಿನಂತಲ್ಲಿ "ಜೈಲು ಭರೋ" ಕಾರ್ಯಕ್ರಮದಲ್ಲಿ ನೂರಾರು ಮಂದಿ ಬಂಧನಕ್ಕೊಳಗಾದರು.

ಒಂದೆಡೆ ಚಲನಚಿತ್ರ ನಟರುಗಳ ಭಾಗವಹಿಸುವಿಕೆಯಿಂದ ಚಳುವಳಿಗೆ ಕಾವೇರಿದರೆ, ಇನ್ನೊಂದೆಡೆ ರಾಜ್ಯದ ಹಲವು ಪ್ರದೇಶಗಳಲ್ಲಿ ಚಳುವಳಿ ನಡೆಯದೇ ಇತ್ತು ಎಂಬುದನ್ನೂ ಗಮನಿಸಬೇಕಾಗಿದೆ. ವರದಿಯನ್ನು ಚಾಚೂ ತಪ್ಪದಂತೆ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಚಳುವಳಿಯು ಪ್ರಾರಂಭವಾದಾಗಿನಿಂದ ರಾಜ್ಯದ ಒಂದೆರಡು ಪ್ರಮುಖ ದೈನಿಕಗಳಲ್ಲಿ ವರದಿಯ ಶಿಫಾರಸ್ಸನ್ನು ವಿಮರ್ಶಾತ್ಮಕವಾಗಿ ನೋಡುವ ಲೇಖನಗಳೂ, ಚರ್ಚೆಗಳೂ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಪ್ರಕಟವಾದುವು. ವರದಿ ಜಾರಿಗೆ ಒತ್ತಾಯಿಸಿ ಚಳುವಳಿ ನಡೆಸುವವರು ಉಳಿದವರನ್ನು ಕನ್ನಡ ವಿರೋಧಿಗಳೆನ್ನುವುದೂ ಪ್ರಾರಂಭವಾಯ್ತು. ಚಳುವಳಿಗೆ ತೀರಾ ಸಂಕುಚಿತ ಮತ್ತು ಕೋಮು ದೃಷ್ಟಿ ತುಂಬುವುದು ಪ್ರಾರಂಭವಾಯ್ತು. "ಕನ್ನಡದಲ್ಲೆ ಬೋರ್ಡು, ಕನ್ನಡದಲ್ಲೆ ವಿದ್ಯಾಭ್ಯಾಸ, ಕನ್ನಡಿಗನಿಗೇ ಉದ್ಯೋಗ"; ಕನ್ನಡ ಮಾತೃ ಭಾಷೆಯಲ್ಲದವರು, ಕರ್ನಾಟಕದಿಂದ ತೊಲಗಿರಿ; ನಾವು ಕನ್ನಡಿಗರು, ಕನ್ನಡ ಮಾತ್ರ ಎಂಬ ಘೋಷಣೆಗಳು ಕಂಡು ಬಂದುವು. ಛಿದ್ರಕಾರಿ ಮತ್ತು ಪ್ರತ್ಯೇಕವಾದಿ ಶಕ್ತಿಗಳೂ ತಲೆ ಎತ್ತಿದವು.

ರಾಜ್ಯ ಸರಕಾರವು ಚಳುವಳಿಗಾರರೊಂದಿಗೆ ಮಾತುಕತೆ ನಡೆಸುವುದಾಗಿ ಹೇಳಿತು. ಕೊನೆಗೂ ಜೂನ್ 4 ರಂದು ಸರಕಾರ ಮತ್ತು ಚಳುವಳಿಗಾರರ ಪ್ರತಿನಿಧಿಗಳೂ ಸೇರಿದಂತೆ ಬೇರೆ ಬೇರೆ ಜನರಿಂದ ಸೇರಿದ್ದ ಸುಮಾರು 50 ಜನರೊಳಗೆ ಎಂಟೊಂಭತ್ತು ತಾಸುಗಳ ಮಾತುಕತೆ ನಡೆಯಿತು. ಮಾತುಕತೆ ಮುಗಿದ ಮೇಲೆ, ವಿಧಾನ ಸಭೆಯಲ್ಲೂ ಚರ್ಚಿಸಿ, ಪರಿಷ್ಕೃತ ಆಜ್ಞೆಯನ್ನು ಬೇಗನೆ ಹೊರಡಿಸುವುದಾಗಿ ಸರಕಾರ ಅಭಿಪ್ರಾಯ ಮಾಡಿದೆಯೆಂದು ವರದಿಯಾಗಿದೆ. ಬಹಳಷ್ಟು ಪಟ್ಟು ಹಿಡಿದಿದ್ದ ಚಳುವಳಿಗಾರರ ನಾಯಕರುಗಳೂ ಸಣ್ಣ ಪುಟ್ಟ ತಿದ್ದುಪಡಿಗಳಿಗೂ ಒಪ್ಪಿದಂತಿದೆ. ಮತ್ತೆ ಇದೀಗ ಚಳುವಳಿ ನಿಂತಂತಿದೆ.

ಗೋಕಾಕ್ ಸಮಿತಿ ವರದಿ ಮತ್ತು ಚಳುವಳಿ/ ಸರಕಾರದ ನಿಲುಮೆ/ನಮ್ಮ ಪಕ್ಷದ ನಿಲುಮೆ :

1982 ಜನವರಿಯಲ್ಲಿ ಸರಕಾರವು ಗೋಕಾಕ್ ವರದಿಯನ್ನು ಒಪ್ಪಿಕೊಂಡಿರುವುದಾಗಿ ಘೋಷಿಸಿದ ಮೇಲೆ ಅಲ್ಪ ಸಂಖ್ಯಾತರಿಂದ, ಅದರಲ್ಲೂ ಉರ್ದು ಮಾತನಾಡುವ ಮುಸ್ಲಿಮ್ ವಿಭಾಗದಿಂದ ಪ್ರತಿಭಟನೆ ಬಂತು. ಆಗ ನಾವು ವರದಿಯ ಶಿಫಾರಸು ಬಗ್ಗೆ ಹೆಚ್ಚಿಗೆ ಯೋಚಿಸಲು ಪ್ರಾರಂಭಿಸಿದ್ದು. ಪರ ಮತ್ತು ವಿರೋಧ ಚಳುವಳಿಯಲ್ಲಿನ ಅಪಾಯಕಾರಿ ಅಂಶಗಳನ್ನು ಗಮನಿಸಿದ ಪಕ್ಷದ ರಾಜ್ಯ ಸಮಿತಿ ಸೆಕ್ರೆಟೇರಿಯೆಟ್ ಏಪ್ರಿಲ್ 9, 10 ರಂದು ಮಂಗಳೂರಿನಲ್ಲಿ ಸೇರಿದಾಗ ಗೋಕಾಕ್ ಸಮಿತಿ ವರದಿಯನ್ನು ಚಾಚೂ ತಪ್ಪದೆ ಜಾರಿಗೊಳಿಸಬೇಕೆಂಬ ನಿಲುವೆ ಸರಿ ಇಲ್ಲ ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿತು. ಚಳುವಳಿಗೆ ಸರಿಯಾದ ನೇತೃತ್ವ ಕೊಟ್ಟು, ಅದರ ದಿಕ್ಕನ್ನು ಬದಲಾಯಿಸುವಂತೆ ಮಾಡಲು ಸೆಕ್ರೆಟೇರಿಯೇಟ್ ಕರೆ ಇತ್ತಿತು.

ಏಪ್ರಿಲ್ 19 ರಂದು ಸರಕಾರವು ತೆಗೆದು ಕೊಂಡಿರುವ ನಿರ್ಣಯವು ತಾತ್ವಿಕವಾಗಿ ಸೂಕ್ತವಾಗಿದೆ; ಆದರೆ ಅದನ್ನು (ಮುಖ್ಯವಾಗಿ ಅಂಕಗಳ ದೃಷ್ಟಿಯಿಂದ) ಇನ್ನೂ ಸರಳ ಮಾಡಬಹುದಿತ್ತೆಂದು ಸೆಕ್ರೆಟೇರಿಯೆಟ್ ಅಭಿಪ್ರಾಯ ಮಾಡಿತ್ತು. ಭಾಷೆಗಾಗಿ ನಡೆಯುವ ಚಳುವಳಿಯು ಯಾವ ದಿಕ್ಕಿನಲ್ಲಿ ನಡೆಯಬೇಕೆಂಬುದನ್ನು ಸೂಚಿಸಿ, ಹೋರಾಟ ನಡೆಸಲು ಸೆಕ್ರೆಟೇರಿಯೆಟ್ ಕರೆ ಇತ್ತಿತು.

ನಮ್ಮ ನಿಲುಮೆಗೆ ಕಾರಣಗಳು :

(1) ಬೇರೆ ಬೇರೆ ರಾಷ್ಟ್ರೀಯ ಭಾಷೆಗಳಿಂದ ಕೂಡಿರುವ ಭಾರತ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಆಯಾಯ ರಾಜ್ಯಗಳ ರಾಷ್ಟ್ರೀಯ (ಪ್ರಾದೇಶಿಕ) ಭಾಷೆಗಳಿಗೆ ಆಡಳಿತದ ಎಲ್ಲ ಹಂತಗಳಲ್ಲೂ ಅಗ್ರಗಣ್ಯ ಸ್ಥಾನವಿರುವಾಗಲೇ ಶೈಕ್ಷಣಿಕ ರಂಗದಲ್ಲಿ ಎಲ್ಲ ಮಾತೃ ಭಾಷೆಗಳಿಗೆ ಸಮಾನತೆ ಇರಬೇಕು. ಇದು ಪ್ರಥಮ ಭಾಷೆಯಿಂದ ಮೊದಲ್ಗೊಂಡು ಅಂಕಗಳ ವಿತರಣೆಯೂ ಸೇರಿ ಇರಬೇಕು.

(2) ಅವರವರ ಮಾತೃ ಭಾಷೆಯಲ್ಲೆ ಕಲಿಯುವುದು ಮತ್ತು ತನ್ನ ಅಭಿವ್ಯಕ್ತಿಯನ್ನು ಪ್ರತಿಫಲಿಸುವುದು ಅತ್ಯಂತ ಸೂಕ್ತವಾಗಿರುವುದರಿಂದ ಒಂದು ಮಾತೃ ಭಾಷೆಯವರಿಗೆ ಇನ್ನೊಂದು ಮಾತೃ ಭಾಷೆಯವರೊಂದಿ, ಮಾತೃ ಭಾಷೆಯಲ್ಲದ ಭಾಷೆಯ ಪೈಪೋಟಿ ನಡೆಸುವುದು ಸಾಮಾನ್ಯವಾಗಿ ಕಷ್ಟ ಸಾಧ್ಯ (ಕೆಲವೇ ಮಂದಿಯಿಂದ ಸಾಧ್ಯ). ಮಾತೃ ಭಾಷೆಯು ಶಿಕ್ಷಣದ ಮಾಧ್ಯಮವಾಗಿದ್ದರೆ, ಮತ್ತೊಂದು ಮಾತೃ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ತೆಗೆದುಕೊಂಡರೆ, ಅದು ಇನ್ನೂ ಕಷ್ಟವಾಗಬಹುದು.

(3) ಒಂದು ರಾಜ್ಯದಲ್ಲಿರುವವರು ಆ ರಾಜ್ಯದ ರಾಷ್ಟ್ರೀಯ/ಪ್ರಾದೇಶಿಕ ಭಾಷೆಯನ್ನು ಕಲಿಯುವುದು ಅಗತ್ಯ. ಆದರೆ ಅವರು ಅದರಲ್ಲಿ ಪಾಂಡಿತ್ಯ ಸಂಪಾದಿಸಬೇಕೆಂದು ಒತ್ತಾಯಿಸದೆ (ಏಕೈಕ ಪ್ರಥಮ ಭಾಷೆಯ ಅರ್ಥ ಹಾಗಾಗುತ್ತದೆ) ವ್ಯಾವಹಾರಿಕವಾಗಿಯೂ, ಉಪಯೋಗಕ್ಕೆ ಬೇಕಾದಷ್ಟು ಕಲಿಯಬೇಕೆನ್ನುವುದೇ ಸೂಕ್ತವಾಗಿದೆ.

(4) ತ್ರಿಭಾಷಾ ಸೂತ್ರ ಇರುವ ತನಕ ಉರ್ದುವಿಗೆ ವಿಶೇಷ ಸಮಸ್ಯೆಯಿದೆ. ಭಾಷೆಗೂ ಉದ್ಯೋಗಕ್ಕೂ ಸಂಬಂಧವಿರುವುದರಿಂದ ಸಾಮಾನ್ಯವಾಗಿ ರಾಜ್ಯ ಭಾಷೆ, ಇಂಗ್ಲೀಸ್, ಹಿಂದಿ ಕಲಿಯಬೇಕೆಂಬುದು ಇಂದಿನ ಪರಿಸ್ಥಿತಿಯಲ್ಲಿ ಸಹಜ. ಉರ್ದು ಭಾಷಿಗರಿಗೆ ಮಾತೃ ಭಾಷೆಯಲ್ಲದ ರಾಜ್ಯ ಭಾಷೆ ಪ್ರಥಮ ಭಾಷೆಯಾದರೆ, ಎರಡನೇ ಭಾಷೆ ಇಂಗ್ಲೀಷ್ ತೆಗೆದುಕೊಳ್ಳಲು (ಇಂದು ಇಂಗ್ಲೀಷ್ ಅಗತ್ಯವಿರುವ ಪರಿಸ್ಥಿತಿಯಲ್ಲಿ) ಪ್ರೇರೇಪಣೆ ಇರುತ್ತದೆ.

ಮೂರನೇ ಭಾಷೆ ಹಿಂದಿ ತೆಗೆದುಕೊಂಡರಂತೂ, ಉರ್ದುವಿಗೆ ಸ್ವಾಭಾವಿಕ ಸಾವು ಬಂದಂತಾಗುತ್ತದೆ! ಉರ್ದು ಭಾಷಿಗಳಿಗೆ ತಮ್ಮದೇ ಒಂದು ರಾಜ್ಯವಿಲ್ಲ ಎಂಬುದನ್ನು ಗಮನಿಸಬೇಕು. ಆದರೆ ಉರ್ದುವೂ ಒಂದು ರಾಷ್ಟ್ರೀಯ ಭಾಷೆಯಾಗಿದೆ.

(5) ಭಾರತ ದೇಶವು ಭಾಷಾವಾರು ರಾಜ್ಯಗಳ ಒಕ್ಕೂಟವಾಗಿದೆ. ಒಂದೊಂದು ಭಾಷಾವಾರು ರಾಜ್ಯವೂ ಒಂದು ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿಲ್ಲ. ರಾಜ್ಯವು ಸ್ವತಂತ್ರ ಸಾರ್ವಭೌಮ ರಾಷ್ಟ್ರವಾದರೂ ಅಲ್ಪ ಸಂಖ್ಯಾತ ಭಾಷೆಗಳಿಗೆ ರಕ್ಷಣೆಕೊಡಲೇಬೇಕು. ಒಂದೊಂದು ರಾಜ್ಯಗಳಲ್ಲೂ ಬೇರೆ ಬೇರೆ ಭಾಷೆಗಳನ್ನಾಡುವ ಬೇರೆ ರಾಜ್ಯಗಳ ಜನರು, ಭಾರತೀಯರು ಇರುತ್ತಾರೆ. ಆದುದರಿಂದ ಭಾಷೆಯ ಬಗೆಗೆ ದೇಶದಾದ್ಯಂತ ಒಂದೇ ಸಮನಾದ ಧೋರಣೆಗಳಿರುವುದು ಭಾಷಾ ಐಕ್ಯತೆ ಮತ್ತು ದೇಶದ ಸಮಗ್ರತೆಯ ದೃಷ್ಟಿಯಿಂದ ಅತೀ ಪ್ರಾಮುಖ್ಯವಾಗಿದೆ.

(6) ಭಾರತ ದೇಶದ ಉಳಿದೆಲ್ಲಾ ರಾಜ್ಯಗಳಲ್ಲಿ ಇರದ ಒಂದು ಹೊಸ ರೀತಿಯ ಕ್ರಮವನ್ನು ಸೂಚಿಸುವ ಔಚಿತ್ಯವೇನಿದೆ? ಭಾಷೆಗಾಗಿ ಚಳುವಳಿಗಳು ನಡೆದಿರುವ / ಭಾಷೆಯನ್ನು ಸಾಕಷ್ಟು ಬೆಳೆಸಿರುವ ನೆರೆ ಹೊರೆಯ ರಾಜ್ಯಗಳಲ್ಲಿಯೇ ಹೀಗೆ ಮಾಡದಿರುವಾಗ ಕರ್ನಾಟಕದಲ್ಲಿ ಹೀಗೆ ಮಾಡಿ ಗೊಂದಲವನ್ನುಂಟುಮಾಡುವ ಔಚಿತ್ಯವೇನಿದೆ? ಬೇರಾವುದೇ ರಾಜ್ಯಗಳಲ್ಲಿ ಇರದ ಸ್ಥಾನ ಸಂಸ್ಕೃತಕ್ಕೆ ಇಲ್ಲಿತ್ತು. ಬೇರೆ ರಾಜ್ಯಗಳಲ್ಲಿ ಅಲ್ಲಿಯ ಪ್ರಾದೇಶಿಕ/ರಾಷ್ಟ್ರೀಯ ಭಾಷೆಗಳಿಗಿರುವ ಸ್ಥಾನ ಕರ್ನಾಟಕದಲ್ಲಿ ಇಲ್ಲಿಯ ಪ್ರಾದೇಶಿಕ ಭಾಷೆ/ರಾಷ್ಟ್ರೀಯ ಭಾಷೆಗೆ ಇರಲಿಲ್ಲ. ಸಂಸ್ಕೃತವನ್ನು ಪ್ರಥಮ ಭಾಷೆಯ ಪಟ್ಟಿಯಿಂದ ಕಿತ್ತು ಹಾಕಿ, ಉಳಿದೆಡೆಗಳಂತೆ ಈ ರಾಜ್ಯದಲ್ಲೂ ಮಾತೃ ಭಾಷೆಗಳಿಗೆ ಪ್ರಥಮ ಭಾಷೆಯ ಸ್ಥಾನ ಕೊಡಲು ಸೂಚಿಸಿದ್ದರೆ ಕನ್ನಡದ ಬೆಳವಣಿಗೆಗೆ ಏನು ಧಕ್ಕೆ ಬರುತ್ತಿತ್ತು?

(7) ಗೋಕಾಕ್ ಸಮಿತಿ ವರದಿಯಲ್ಲೂ, ವರದಿಯನ್ನು ಚಾಚೂ ತಪ್ಪದೆ ಜಾರಿ ಮಾಡಬೇಕೆಂದು ಒತ್ತಾಯಿಸುವವರೂ ಭಾಷೆಯ ಪ್ರಶ್ನೆಯನ್ನು ತಿರುಗ ಮುರುಗ ಮಾಡಿರುವುದು ಸ್ಪಷ್ಟ. ಭಾಷೆಯು ಅಭಿವೃದ್ಧಿಯಾಗಬೇಕಾದರೆ ಮೊದಲು ಅದನ್ನು ಆಡಳಿತ ಭಾಷೆಯನ್ನಾಗಿ ಮಾಡಿ, ಬಳಕೆಯ ಮತ್ತು ಅಗತ್ಯದ ಭಾಷೆಯನ್ನಾಗಿ ಮಾಡಿದರೆ, ಉಳಿದ ಭಾಷಿಗರೂ ಅದನ್ನು ಕಲಿಯಲು ಪ್ರೇರೇಪಣೆ ಬರುತ್ತದೆ. ಹಾಗೆಯೇ ಮಾಡುವುದಕ್ಕೆ ಒತ್ತಾಯಿಸುವ ಬದಲು, ಮೊದಲು ರಾಜ್ಯ/ಪ್ರಾದೇಶಿಕ/ರಾಷ್ಟ್ರೀಯ ಭಾಷೆ, ಅಂದರೆ ನಮ್ಮ ರಾಜ್ಯದಲ್ಲಿ ಕನ್ನಡವನ್ನು ಏಕೈಕ ಪ್ರಥಮ ಭಾಷೆ ಎಂದು ಮಾಡಿದರೆ ಗಾಡಿಯನ್ನು ಕುದುರೆಯ ಮುಂದೆ ಕಟ್ಟಿದಂತಾಗುವುದಿಲ್ಲವೇ?

(8) ಉಳಿದ ಭಾಷಿಗರು ಕನ್ನಡವನ್ನು ಏಕೈಕ ಪ್ರಥಮ ಭಾಷೆಯೆಂದು ಕಲಿಯಬೇಕೆಂದು ಒತ್ತಾಯಿಸುವುದಕ್ಕೂ ಹೆಚ್ಚಿಗೆ ಮುಖ್ಯವಾದ ವಿಚಾರವೆಂದರೆ ಕನ್ನಡ ಮಾತೃ ಭಾಷೆ ಆಗಿರುವವರಿಗೆ ಅದು ಪ್ರಪ್ರಥಮ ಭಾಷೆಯಾಗಿರಬೇಕೆನ್ನುವುದೇ ಆಗಿದೆ. ಕನ್ನಡ ಮಾತೃ ಭಾಷಿಗರಿಗೆ ಕನ್ನಡದಲ್ಲೆ ಶಿಕ್ಷಣ, ಅದೇ ಪ್ರಥಮ ಭಾಷೆಯಾಗುವುದು ಮೊದಲ ಕೆಲಸವಾಗಿದೆ. ಅದೇ ಆಗದಿರುವಾಗ ಬೇರೆ ಭಾಷಿಗರನ್ನು ಕನ್ನಡದಲ್ಲಿ ಪಾಂಡಿತ್ಯ ಪಡೆಯಲು ಒತ್ತಾಯಿಸುವುದು ಅದೆಷ್ಟು ಸಮಂಜಸ?

(9) ಗೋಕಾಕ್ ವರದಿಯನ್ನು ಸೂಕ್ಷ್ಮವಾಗಿ ಅಭ್ಯಸಿಸುವಾಗ ಅದರಲ್ಲಿರುವ ವಾದ ಮತ್ತು ಸಲಹೆಗಳನ್ನು ನೋಡಿದಾಗ ಪ್ರಾದೇಶಿಕ ಸಂಕುಚಿತ ವಾದ ಮತ್ತು ಕೋಮುವಾದದ ಅಂಶಗಳೂ ಇವೆ ಎಂದು ಕಂಡು ಬರುತ್ತಿದೆ.

ಈ ಮೇಲಿನ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿ ಸೆಕ್ರೆಟಾರಿಯೆಟ್ ಗೋಕಾಕ್ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುವಾಗ ಅಲ್ಪ ಸಂಖ್ಯಾತ ಭಾಷಿಗರ ಹಿತಾಸಕ್ತಿಗಳನ್ನೂ ಗಮನದಲ್ಲಿರಿಸಿಕೊಂಡು, ಸೂಕ್ತ ಮಾರ್ಪಾಟುಗಳೊಂದಿಗೆ ಅದನ್ನು ಜಾರಿಗೊಳಿಸಬೇಕೆಂಬ ನಿಲುವೆಯನ್ನು ತಾಳಿತು.

ಏಪ್ರಿಲ್‌ನಲ್ಲಿ (ಮಂಗಳೂರು ಸೆಕ್ರೆಟಾರಿಯೆಟ್ ಸಭೆಯ ನಂತರ) "ಕನ್ನಡ ಬೆಳೆಸಿ, ಇಂಗ್ಲೀಷನ್ನು ದೂರಮಾಡಿ, ಉರ್ದು ಉಳಿಸಿ" ಎಂಬ ಘೋಷಣೆಯನ್ನು ಕೊಟ್ಟಿರುವುದೂ ಈ ಮೇಲೆ ಹೇಳಿರುವ ತರ್ಕದ ಹಿನ್ನೆಲೆಯೇ ಆಗಿದೆ. ಉರ್ದು ಉಳಿಸಿ ಎಂಬುದಕ್ಕಿಂತಲೂ ಸಮಂಜಸ "ಅಲ್ಪ ಸಂಖ್ಯಾತ ಭಾಷೆಗಳನ್ನು ಉಳಿಸಿ" ಎಂಬುದಾಗಿದೆ ಎಂಬ ಪ್ರತಿಕ್ರಿಯೆಯೂ ಕೆಲವು ಸಂಗಾತಿಗಳಿಂದ ಕಂಡು ಬಂದಿತ್ತು. ಬಹುಷಃ ಇದು ಸರಿಯಾದ ಪ್ರತಿಕ್ರಿಯೆ ಎನಿಸುತ್ತದೆ.

ಏಪ್ರಿಲ್ 19 ರಂದು ರಾಜ್ಯ ಸರಕಾರವು ತೆಗೆದುಕೊಂಡ ನಿರ್ಣಯವನ್ನು ತಾತ್ವಿಕವಾಗಿ ಸೂಕ್ತವೆನ್ನಲು ಕಾರಣಗಳು (1) ಸಂಸ್ಕೃತಕ್ಕೆ ಪ್ರಥಮ ಭಾಷೆಯ ಸ್ಥಾನವಿಲ್ಲ (2) ಶೈಕ್ಷಣಿಕ ರಂಗದಲ್ಲಿ ಎಲ್ಲ ಮಾತೃ ಭಾಷೆಗಳಿಗೆ ಸಮಾನತೆ ಇದೆ (3) ರಾಜ್ಯದಲ್ಲಿ ಎಲ್ಲರೂ ಕನ್ನಡ ಕಲಿಯುವಂತಾಗಿದೆ (4) ಎಲ್ಲ ಭಾಷಿಗರಿಗೂ ಶೈಕ್ಷಣಿಕ ರಂಗದಲ್ಲಿ ಭಾಷೆಗಳ ಮೇಲೆ ಸಮಾನ ಅಂಕಗಳ ಭಾರ ಇದೆ. ಸರಕಾರದ ಈ ನಿರ್ಣಯವು ತಾತ್ವಿಕವಾಗಿ ಸೂಕ್ತವೆನಿಸಿದರೂ, ಅಂಕಗಳ ದೃಷ್ಟಿಯಿಂದ ಇನ್ನೂ ಸರಳ ಸೂತ್ರವನ್ನು ಹುಡುಕಬಹುದಿತ್ತು. ನಿರ್ಣಯ ಮಾಡುವ ಮೊದಲು ಸರಕಾರವು ಭಾಷಾ ಪ್ರತಿನಿಧಿಗಳು, ವಿದ್ಯಾಭ್ಯಾಸ ಪರಿಣಿತರು, ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿದ್ದರೆ ಉತ್ತಮ ಸೂತ್ರ ಕಂಡು ಹಿಡಿಯಬಹುದಿತ್ತು. ಇನ್ನಾದರೂ ಹಾಗೆಯೇ ಮಾಡಬೇಕೆಂಬುದು ಸೆಕ್ರೆಟಾರಿಯೆಟ್ ನಿಲುವೆಯಾಗಿತ್ತು.

ಅಂಕಗಳ ಕುರಿತು ಹೇಳುವುದಿದ್ದರೆ ಎಲ್ಲ ಭಾಷಿಗರಿಗೂ ಭಾಷೆಗಳ ಮೇಲೆ (ಮಾತೃ ಭಾಷೆ ಮತ್ತು ಬೇರೆ ಭಾಷೆ) ಒಂದೇ ಸಮನಾದ ಅಂಕಗಳ ತೂಕ ದೊರೆಯುವುದು ಸರಿಯಾದ ತತ್ವ. ಅದನ್ನು ಮಾಡುವುದಕ್ಕಾಗಿ ಸರಕಾರವು ಈಗಾಗಲೇ ಮಾಡಿರುವ ನಿರ್ಣಯದಲ್ಲಿರುವಂತೆ ಅಂಕಗಳ ಹೊರೆಯನ್ನು ಹೆಚ್ಚಿಸಿರುವುದರ ಬದಲು ಮಹಾರಾಷ್ಟ್ರ, ಆಂಧ್ರ ರಾಜ್ಯಗಳಲ್ಲಿರುವಂತೆ ಇಲ್ಲಿಯೂ ಮೂರೂ ಭಾಷೆಗಳಿಗೆ 100 ರಂತೆ ಸಮಾನ ಅಂಕಗಳನ್ನಿರಿಸಬಹುದು. ಅಥವಾ ಸರಕಾರವು ಈಗಾಗಲೇ ತೆಗೆದುಕೊಂಡಿರುವ ನಿರ್ಣಯದ ಆಧಾರದಲ್ಲೆ ಪ್ರಥಮ ಭಾಷೆಗೆ 125, ದ್ವಿತೀಯ ಭಾಷೆಗೆ 100, ತೃತೀಯ ಭಾಷೆಗೆ 75 ಎಂದು ಮಾಡಬಹುದು. ಆದರೆ ಎಲ್ಲ ಮಾತೃ ಭಾಷೆಗಳಿಗೂ ಪ್ರಥಮ ಭಾಷೆಯ ಸ್ಥಾನವಿರಬೇಕು. ಕನ್ನಡಕ್ಕೆ/ಪ್ರಾದೇಶಿಕ ಭಾಷೆಗೆ ಹೆಚ್ಚು ಒತ್ತು ಕೊಡಲೂ, ಅದನ್ನು ಕಲಿಯುವಂತೆ ಪ್ರೇರೇಪಣೆ ನೀಡಲೂ, ಉಳಿದ ಭಾಷೆಗಳವರಿಗೆ ಅವರವರ ಪಾಠದಲ್ಲಿ ಅಂಕಗಳನ್ನು ಗಳಿಸುವುದು (ಏಕೆಂದರೆ ಕರ್ನಾಟಕದಲ್ಲಿ ಬೇರೆ ಭಾಷೆಗಳ ಅಧ್ಯಯನ ಸ್ವಾಭಾವಿಕವಾಗಿಯೇ ಅಷ್ಟು ಕಠಿಣ ಆಗಿರುವುದಿಲ್ಲ) ಸುಲಭವಿರಬಹುದಾದುದರಿಂದಲೂ, ಕನ್ನಡ ವಿಶೇಷ ಪತ್ರಿಕೆ ಒಂದನ್ನು ಐಚ್ಛಿಕವಾಗಿ ಸೇರಿಸಿಕೊಳ್ಳಬಹುದು. ಅದನ್ನು ತೆಗೆದುಕೊಳ್ಳುವುದು ಕಡ್ಡಾಯವಲ್ಲ. ಆದರೆ ಅದನ್ನು ತೆಗೆದುಕೊಂಡವರಿಗೆ ಅದರಲ್ಲಿ ದೊರೆಯುವ ಅಂಕಗಳನ್ನು ಅವಶ್ಯವಿದ್ದರೆ ಬೋನಸ್ ಅಂಕಗಳನ್ನಾಗಿ ತೆಗೆದುಕೊಳ್ಳಬೇಕು. ಈ ರೀತಿಯ ಸೂತ್ರವೊಂದನ್ನು ರೂಪಿಸಬಹುದು.

ಭಾಷೆಗಾಗಿ ನಡೆಯಬೇಕಾಗಿರುವ ಹೋರಾಟ :

ಈ ಟಿಪ್ಪಣಿಯ ಮೊದಲ ಭಾಗದಲ್ಲಿ ಹೇಳಿರುವಂತೆ ರಾಜ್ಯ ಭಾಷೆಯಾದ ಕನ್ನಡವು ಬೆಳೆಯಬೇಕಾದರೆ, ಅದು ತನ್ನ ಅಗ್ರಗಣ್ಯ ಸ್ಥಾನವನ್ನು ಪಡೆಯಬೇಕಾದರೆ, ರಾಜ್ಯದಲ್ಲಿ ವಾಸಿಸುವ ಎಲ್ಲರೂ ಕನ್ನಡವನ್ನು ಕಲಿಯುವಂತಾಗಬೇಕಾದರೆ ಆಗಬೇಕಾಗಿರುವ ಮೊದಲ ಕೆಲಸ ಕನ್ನಡವನ್ನು ಆಡಳಿತದ ಎಲ್ಲ ಹಂತಗಳಲ್ಲೂ ಬಳಸಿಕೊಳ್ಳುವುದು ಮತ್ತು ಅದರೊಂದಿಗೆ ಇಂಗ್ಲೀಷನ್ನು ದೂರ ಮಾಡುವುದು. ಅದರೊಂದಿಗೆ ಮಾತೃ ಭಾಷೆಯನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದೂ ಆಗಬೇಕಿದೆ.

ಇಂದು ಉರ್ದು, ತಮಿಳು, ಮಲಯಾಳಂ ಅಥವಾ ಇನ್ನಿತರ ಭಾಷೆಗಳಿಂದಲಾಗಿ ಕನ್ನಡದ ಬೆಳವಣಿಗೆಗೆ ಅಡ್ಡಿಯಾಗಿರುವುದಿಲ್ಲ. ಆಡಳಿತದಲ್ಲೂ, ವ್ಯಾವಹಾರಿಕವಾಗಿಯೂ ಇಂಗ್ಲೀಷ್ ಬಳಕೆಯಲ್ಲಿರುವುದರಿಂದ, ಇಂಗ್ಲೀಷ್ ಗೊತ್ತಿರುವುದು ಅವಶ್ಯ ಮತ್ತು ಉಪಯುಕ್ತ ಎಂಬ ಕಾರಣದಿಂದ ಇಂಗ್ಲೀಷ್ ಬಲ್ಲವರಿಗೆ ಪ್ರಾಧಾನ್ಯತೆ ದೊರೆಯುತ್ತಿದೆ. ಈ ಪರಿಸ್ಥಿತಿಯನ್ನು ಹೋಗಲಾಡಿಸಲೇಬೇಕು.

ರಾಜ್ಯದ ಪುನರ್ಸಂಘಟನೆಯಾದ ಮೇಲೆ ಅರ್ಧದಲ್ಲೇ ನಿಂತಿರುವ ಭಾಷೆಗಾಗಿಯ ಹೋರಾಟವನ್ನು ಮೇಲೆ ಹೇಳಿರುವ ಅಂಶಗಳನ್ನು ಗಮನದಲ್ಲಿಟ್ಟು ಮುಂದುವರಿಸಲೇಬೇಕು. ಇಂಗ್ಲೀಷ್ ಭಾಷೆಯನ್ನು ದೂರ ಮಾಡುವುದಕ್ಕಾಗಿಯೂ, ಕನ್ನಡ ಭಾಷೆಯನ್ನು ಆಡಳಿತ ಭಾಷೆ ಮತ್ತು ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದಕ್ಕೂ; ಅವರವರ ಮಾತೃ ಭಾಷೆಯಲ್ಲಿ ಮೇಲ್ಮಟ್ಟದ ವಿದ್ಯಾಭ್ಯಾಸದವರೆಗೆ ಶಿಕ್ಷಣ ಪಡೆಯಲೂ, ಎಲ್ಲ ಮಾತೃ ಭಾಷೆಗಳ ಸಮಾನತೆಯನ್ನು ಶೈಕ್ಷಣಿಕ ರಂಗದಲ್ಲಿ ಉಳಿಸಿಕೊಳ್ಳಲು ಕ್ರಮವಹಿಸಿಕೊಳ್ಳುವಂತೆಯೂ ಒತ್ತಾಯಿಸಿ ನಮ್ಮ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಮುತುವರ್ಜಿಯಿಂದ ಹೋರಾಟವನ್ನು ಮುಂದಕ್ಕೊಯ್ಯಬೇಕು. ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು, ಎಲ್ಲ ಪ್ರಗತಿಪರ ಜನ ವಿಭಾಗವನ್ನೂ ಸೇರಿಸಿಕೊಂಡು, ಜನರಲ್ಲಿ ಭಾಷೆಯ ಬಗ್ಗೆ ಸರಿಯಾದ ತಿಳುವಳಿಕೆ ಮೂಡಿಸುವುದು, ಹೋರಾಟವನ್ನು ನಡೆಸುವುದು—ಇವೆಲ್ಲಾ ಆಗಬೇಕು. ಈ ದಿಸೆಯಲ್ಲಿ ಮುಂದೆ ಹೋಗುವ ಪ್ರಪ್ರಥಮ ಹಂತವಾಗಿ ನಮ್ಮ ದಿನ ನಿತ್ಯದ ವ್ಯವಹಾರಗಳಲ್ಲಿ ಪಕ್ಷ/ಸಾಮೂಹಿಕ ಸಂಘಟನೆಗಳ ಕೆಲಸದಲ್ಲಿ ಕನ್ನಡವನ್ನು ಬಳಸಬೇಕು. ನಾವು ಇಂಗ್ಲೀಷನ್ನು ದೂರ ಮಾಡಲೂ, ಈ ಬಗ್ಗೆ ಸರಕಾರದ ಮೇಲೆ ಒತ್ತಾಯ ತರುವುದಕ್ಕಾಗಿಯೂ ಮುಂದೆ ಬರಬೇಕು.

ವಿಚಾರ ಗೋಷ್ಠಿಗಳನ್ನು ನಡೆಸುವುದು, ಲೇಖನಗಳನ್ನು ಬರೆಯುವುದು, ಸಾಹಿತ್ಯವನ್ನು ಮಾರಾಟ ಮಾಡುವುದು, ಸಾಮೂಹಿಕ ಸಂಘಟನೆಗಳು, ಅದರಲ್ಲೂ ಮುಖ್ಯವಾಗಿ ಕಾರ್ಮಿಕ ಸಂಘಟನೆ ಮತ್ತು ವಿದ್ಯಾರ್ಥಿ ಯುವಜನ ಸಂಘಟನೆಗಳು ಕನ್ನಡವನ್ನು ಬಳಸುವುದಕ್ಕೆ ಒತ್ತಾಯಿಸಿ ಚಳುವಳಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಅವಶ್ಯವಿದೆ. ಪಕ್ಷದ ಜಿಲ್ಲಾ ಮತ್ತು ಪ್ರಾದೇಶಿಕ ಸಮಿತಿಗಳು ಈ ದಿಸೆಯಲ್ಲಿ ಕಾರ್ಯೋನ್ಮುಖರಾಗಬೇಕು. ಸತತ ಪ್ರಚಾರ, ಪ್ರತಿಭಟನೆ ನಡೆಸಬೇಕು.

ಗೋಕಾಕ್ ವರದಿಯನ್ನು ಚಾಚೂ ತಪ್ಪದೆ ಜಾರಿ ಮಾಡಬೇಕೆಂದು ಪಟ್ಟು ಹಿಡಿದು ಚಳುವಳಿ ನಡೆಸಿದವರಲ್ಲಿ, ಅದರ ನಾಯಕತ್ವದ ಒಂದು ವಿಭಾಗದವರಿಂದ, ಕಮ್ಯುನಿಸ್ಟರು ಕನ್ನಡ ವಿರೋಧಿಗಳೆಂಬ ಪ್ರಚಾರ ನಡೆದಿದೆ.

ಹಾಗೆ ಕಮ್ಯುನಿಸ್ಟ್ ವಿರೋಧಿ ಪ್ರಚಾರ ಮಾಡುವವರು ಭಾಷೆಯ ಪ್ರಶ್ನೆಯನ್ನು ಹೇಗೆ ತಿರುಗ ಮುರುಗ ಮಾಡಿರುವರೆಂಬುದನ್ನು ಜನತೆಗೆ ತಿಳಿಯಪಡಿಸಬೇಕು. ಅಪಪ್ರಚಾರಕ್ಕೆ ತಕ್ಕುದಾದ ಉತ್ತರ ನೀಡಬೇಕು.

[ತಾರೀಕು 10-6-82 ರಂದು ಬೆಂಗಳೂರಿನಲ್ಲಿ ಸೇರಿದ್ದ ಪಕ್ಷದ ರಾಜ್ಯ ಸಮಿತಿ ಸಭೆಯಲ್ಲಿ ಈ ದಸ್ತಾವೇಜನ್ನು ಅಂಗೀಕರಿಸಲಾಗಿದೆ. ಜೂನ್ 4 ರಂದು ಸರಕಾರ ಮತ್ತು ಚಳುವಳಿಗಾರ ಪ್ರತಿನಿಧಿಗಳೂ, ಸಾಹಿತಿಗಳೂ ಸೇರಿದ್ದ ಸಭೆಯಲ್ಲಿ ಸರಕಾರವು ಏಪ್ರಿಲ್ 19ರ ತೀರ್ಮಾನವನ್ನು ಪರಿಷ್ಕೃತಗೊಳಿಸಿ ಎಲ್ಲರಿಗೂ ಒಪ್ಪಿಗೆಯಾಗುವಂತೆ ಒಂದು ಸೂತ್ರವನ್ನು ಜಾರಿಗೆ ತರುವುದಾಗಿ ಹೇಳಿರುವುದಾಗಿ ವರದಿಯಾಗಿತ್ತು. ಇದೀಗ ಸರಕಾರವು ಜೂನ್ 24 ರಂದು ವಿಧಾನ ಸಭೆ ಮತ್ತು ಪರಿಷತ್ತುಗಳಲ್ಲಿ ಒಂದು ಪರಿಷ್ಕೃತ ಸೂತ್ರವನ್ನು ಮಂಡಿಸಿ, ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರ ಹೊರತು ಉಳಿದೆಲ್ಲರ ಬೆಂಬಲ ದೊರೆತಿದೆ. ಸರಕಾರದ ಹೊಸ ಸೂತ್ರದ ಪ್ರಕಾರ ಕನ್ನಡ ಏಕೈಕ ಪ್ರಥಮ ಭಾಷೆಯಾಗಿದ್ದು ಅದಕ್ಕೆ 125 ಅಂಕಗಳಿರುತ್ತವೆ. ಉಳಿದ ಭಾಷೆಗಳಿಗೆ, ಅಂದರೆ ದ್ವಿತೀಯ ಮತ್ತು ತೃತೀಯ ಭಾಷೆಗಳಿಗೆ 100 ರಂತೆ ಅಂಕಗಳಿರುತ್ತವೆ. ಕನ್ನಡ ಮಾತೃ ಭಾಷೆಯುಳ್ಳದವರಿಗೆ 10 ವರ್ಷಗಳ ಕಾಲ ಕನ್ನಡದಲ್ಲಿ ಶೇ. 15 ಗ್ರೇಸ್ ಅಂಕಗಳಿರುತ್ತವೆ. ಈ ಸೂತ್ರವು ಗೋಕಾಕ್ ಸಮಿತಿ ವರದಿಯ ಶಿಫಾರಸಿನ ಮುಖ್ಯಾಂಶದಲ್ಲಿ ಶೇ. 75 ರಷ್ಟು ಬದಲು ಮಾಡಿದೆ. ವರದಿ ಶಿಫಾರಸ್ಸಿನಲ್ಲಿ ಕನ್ನಡ ಏಕೈಕ ಪ್ರಥಮ ಭಾಷೆಯಾಗಿದ್ದು ಅದಕ್ಕೆ 150 ಅಂಕಗಳಿರಬೇಕೆಂದೂ, ತೃತೀಯ ಭಾಷೆಗೆ 50 ಅಂಕಗಳಿರಬೇಕೆಂದೂ ಸೂಚಿಸಲಾಗಿತ್ತು. ಇದರ ಪ್ರಕಾರ ಪ್ರಥಮ ಭಾಷೆ ಮತ್ತು ತೃತೀಯ ಭಾಷೆಗಳೊಳಗೆ 100 ಅಂಕಗಳ ವ್ಯತ್ಯಾಸವಿತ್ತು. ಈಗಿನ ಸೂತ್ರದ ಪ್ರಕಾರ ಪ್ರಥಮ ಭಾಷೆ ಮತ್ತು ತೃತೀಯ ಭಾಷೆಗಳೊಳಗೆ 25 ಅಂಕಗಳ ವ್ಯತ್ಯಾಸವಿದೆ. ಗೋಕಾಕ್ ವರದಿಯ ಶಿಫಾರಸಿನ ಪ್ರಕಾರ ಕನ್ನಡ ಮಾತೃ ಭಾಷೆಯಾದವರಿಗೆ ಮಾತೃ ಭಾಷೆಗೆ 150 ಅಂಕಗಳಿದ್ದರೆ ಮಾತೃ ಭಾಷೆಯಲ್ಲದ ಭಾಷೆಗಳಿಗೆ 150 ಅಂಕಗಳಿರುತ್ತವೆ. ಗೋಕಾಕ್ ವರದಿಯ ಶಿಫಾರಸಿನ ಪ್ರಕಾರ ಕನ್ನಡೇತರ ಮಾತೃ ಭಾಷೆಯವರಿಗೆ ಮಾತೃ ಭಾಷೆಗೆ 50 ಅಥವಾ 100 ಮತ್ತು ಮಾತೃ ಭಾಷೆಯಲ್ಲದ

(8ನೇ ಪುಟ ನೋಡಿ)

ಕಂಕನಾಡಿ ನಾಗರಿಕ ಸಮಿತಿಯವರಿಂದ ಉಚಿತ ಪುಸ್ತಕ ವಿತರಣೆ

ಮಂಗಳೂರಿನ ಕಂಕನಾಡಿ, ಮರೋಳಿ, ನಾಗೂರಿ, ಬಜಾಲು ಮತ್ತು ಗೋರಿ ಗುಡ್ಡೆ ಪ್ರದೇಶಗಳಲ್ಲಿರುವ ಆರ್ಥಿಕವಾಗಿ ಹಿಂದುಳಿದ ಸುಮಾರು 200 ಮಂದಿ ಬಡ ವಿದ್ಯಾರ್ಥಿಗಳಿಗೆ, ಸುಮಾರು 3500/— ರೂ. ಬೆಲೆ ಬಾಳುವ ಪಠ್ಯ ಹಾಗೂ ಬರೆಯುವ ಪುಸ್ತಕಗಳನ್ನು, ನಾಗರಿಕ ಸಮಿತಿಯವರಿಂದ ಉಚಿತವಾಗಿ ವಿತರಣೆ ಮಾಡಲಾಯಿತು.

ಸಮಾರಂಭದ ಪ್ರಾರಂಭದಲ್ಲಿ ನಾಗರಿಕ ಸಮಿತಿಯ ಕಾರ್ಯದರ್ಶಿ ಶ್ರೀ ಬಿ. ಯಃ. ಮಾಧವರವರೂ, ಸಮಿತಿಯ ಧ್ಯೇಯ ಉದ್ದೇಶಗಳನ್ನು ವಿವರಿಸುತ್ತಾ ಆರ್ಥಿಕ ಅಡಚಣೆಗಳಿಂದಾಗಿ ಎಳೆಯ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗ ಬಾರದೆಂದೂ, ಅದಕ್ಕಾಗಿ ಮಾಡಿದ ಈ ಅಳಿಲ ಸೇವೆಯ ಉಪಯೋಗವನ್ನು ವಿದ್ಯಾರ್ಥಿಗಳು ಪಡೆದು ತಮ್ಮ ಒಳ್ಳೆಯ ಭವಿಷ್ಯವನ್ನು ರೂಪಿಸಲು ಮುಂದಾಗಬೇಕೆಂದು ಕರೆಯಿತ್ತರು.

ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ಕೆ.ಪಿ.ವಿಟ್ಠಲ್‌ರಾವ್ (ಅಡ್ವೊಕೇಟ್) ಅವರು ಪುಸ್ತಕಗಳನ್ನು ಉಚಿತವಾಗಿ ವಿತರಣೆ ಮಾಡಿದರು.

ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಶ್ರೀ ಕೆ. ಕರಿಯಪ್ಪನವರು ಇಂದು ಸಮಾಜದಲ್ಲಿ ಕಾಣಿಸುವ ದುಷ್ಪಚಟಗಳಿಗೆ ವಿದ್ಯಾರ್ಥಿಗಳು ಎಂದೂ ಬಲಿಬೀಳದ ಹಾಗೆ ಮತ್ತು ಜಾತಿ, ಮತ, ವ್ಯತ್ಯಾಸಗಳನ್ನ ಮರೆತು, ಐಕ್ಯತೆಯಿಂದ ಊರಿನ ಜನತೆಯ ಉನ್ನತಿಗಾಗಿ ಕೆಲಸ ಮಾಡಲು ಮುಂದಾಗುವಂತೆ ಮಾಡಲು ಅಧ್ಯಾಪಕರುಗಳು ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡಬೇಕು. ಹಾಗೂ ವಿದ್ಯಾರ್ಥಿಗಳು ಒಳ್ಳೆಯ ರೀತಿಯಲ್ಲಿ ಅಭ್ಯಾಸಮಾಡಿ ಮುಂದೆ ಬರಬೇಕೆಂದು ವಿನಂತಿಸಿದರು.

ಸಮಿತಿಯ ಕಲಾಪಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಕಂಕನಾಡಿ ಬೋರ್ಡುಶಾಲೆ, ಗಾರ್ಡಿಯನ್ ಎಂಜಲ್ಸ್ ಶಾಲೆಯ ಪ್ರಾಧ್ಯಾಪಿಕೆಯರು ಭಾಷಣ ಮಾಡಿದರು. ಕೊನೆಗೆ ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

ಗೋಕಾಕ್ ವರದಿ ಕುರಿತು

(7ನೇ ಪುಟದಿಂದ)

ಭಾಷೆಗಳಿಗೆ 250 ಅಥವಾ 200 ಅಂಕಗಳಿರುತ್ತದೆ. ಅಂದರೆ ಮಾತೃ ಭಾಷೆ ಮತ್ತು ಉಳಿದ ಭಾಷೆಗಳ ಮೇಲೆ ಇರುವ ಅಂಕಗಳು ಕನ್ನಡ ಮಾತೃ ಭಾಷೆಯವರಿಗೂ ಉಳಿದ ಭಾಷಿಗರಿಗೂ ಬಹಳಷ್ಟು ವ್ಯತ್ಯಾಸ ಇರುತ್ತದೆ. ಏಪ್ರಿಲ್ 19 ರಂದು ಸರಕಾರ ತೆಗೆದುಕೊಂಡ ನಿರ್ಣಯದಲ್ಲಿ ಎಲ್ಲ ಭಾಷಿಗರಿಗೂ, ಎಲ್ಲ ಭಾಷೆಗಳ ಮೇಲೂ ಸಮಾನ ಅಂಕಗಳ ತೂಕವಿರುತ್ತದೆ. ಸರಕಾರವು ಜೂನ್ 24 ರಂದು ತೆಗೆದುಕೊಂಡಿರುವ ತೀರ್ಮಾನದ ಪ್ರಕಾರ ಕನ್ನಡ ಮಾತೃ ಭಾಷೆಯವರಿಗೂ, ಉಳಿದ ಭಾಷಿಗರಿಗೂ ಮಾತೃ ಭಾಷೆ ಮತ್ತು ಇತರೆ ಭಾಷೆಗಳ ಮೇಲಿರುವ ಅಂಕಗಳ ವ್ಯತ್ಯಾಸ ಕೇವಲ 25 ಅಂಕಗಳಷ್ಟೆ ಇದ್ದು, ಕನ್ನಡೇತರರಿಗೆ 10 ವರ್ಷಗಳ ಕಾಲ ಶೇ. 15 ಗ್ರೇಸ್ ಅಂಕಗಳೂ ಇವೆ. ಅಂದರೆ ಸರಕಾರದ ಪರಿಷ್ಕೃತ ತೀರ್ಮಾನವು ಎಲ್ಲ ಮಾತೃ ಭಾಷೆಗಳಿಗೆ ಸಮಾನ ಅಂಕಗಳ ತೂಕವಿರಬೇಕೆಂಬ ಸೂತ್ರಕ್ಕೆ ಸಮೀಪವಿದೆ. ಗೋಕಾಕ್ ವರದಿ ಶಿಫಾರಸಿನ ಮುಖ್ಯ ಸೂಚನೆಯಿಂದ ಅಂಕಗಳ ದೃಷ್ಟಿಯಿಂದ ದೂರವಿದೆ. ಹೊಸ ಸೂತ್ರವು ಹೊಂದಾಣಿಕೆ ಸೂತ್ರವನ್ನು ಅಳವಡಿಸಿಕೊಂಡಂತಿದೆ. ಆದರೆ ಈ ಸೂತ್ರವು ಶೈಕ್ಷಣಿಕ ರಂಗದಲ್ಲಿ ಮಾತೃ ಭಾಷೆಗಳಿಗೆ ಸಮಾನ ಸ್ಥಾನವಿರಬೇಕೆಂಬ ತತ್ವವನ್ನು ಒಪ್ಪಿಗಳೆದಿದೆ. ಇದರ ಸಂವಿಧಾನಾತ್ಮಕ ಬಾಧಕ ಬಾಧಕ, ಮತ್ತಿತರ ಪರಿಣಾಮಗಳನ್ನು ಕಾದು ನೋಡಬೇಕು].

ವಿಲೀನದ ಪ್ರಶ್ನೆಯೇ ಇಲ್ಲ

(2ನೇ ಪುಟದಿಂದ)

ಮತ್ತು ಅಂತಿಮವಾಗಿ ಈ ಎರಡೂ ಪಕ್ಷಗಳ ವಿಲೀನಕ್ಕಾಗಿ ನಡೆದಿದೆ ಎಂಬಂತೆ ಸುದ್ದಿ ಪ್ರಕಟಿಸಿವೆ."

"ಪತ್ರಿಕೆಯ ಒಂದು ವಿಭಾಗದಲ್ಲಿ ಈ ರೀತಿಯ ತಪ್ಪು ಚಿತ್ರವನ್ನು ಕೊಟ್ಟಿರುವುದರ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಲಿಯು ತನ್ನ ಅಸಂತೋಷವನ್ನು ವ್ಯಕ್ತಪಡಿಸುತ್ತದೆ. ಕಮ್ಯುನಿಸ್ಟ್ ಐಕ್ಯತೆ ಅಥವಾ ಎರಡು ಪಕ್ಷಗಳು ಪರಸ್ಪರ ವಿಲೀನವಾಗುವಂತಹ ವಿಚಾರಗಳು ಸಮ್ಮೇಳನದ ವಿಷಯ ಸೂಚಿಯಲ್ಲಿ ಇರಲೇ ಇಲ್ಲ. ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿಗಳಿಗೆ ಸಂಬಂಧಿಸಿದ ಹಲವಾರು ವಿಚಾರಗಳಲ್ಲೂ, ಭಾರತ ದೇಶದಲ್ಲಿ ಕ್ರಾಂತಿಯ ದಾರಿಯಂತಹ ಪ್ರಶ್ನೆಗಳ ಬಗ್ಗೆಯೂ ಸಿ.ಪಿ.ಐ.(ಎಂ)ಗೆ ಸಿ. ಪಿ. ಐ. ನೊಂದಿಗೆ ಮೂಲಭೂತ ಭಿನ್ನಾಭಿಪ್ರಾಯಗಳಿರುವುದರಿಂದ ಈ ಎರಡೂ ಪಕ್ಷಗಳು ಪರಸ್ಪರ ವಿಲೀನವಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ."

"ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟಿಗಾಗಿ ಶ್ರಮಿಸುತ್ತಿರುವಾಗಲೇ, ಇಂದಿರಾ ಕಾಂಗ್ರೆಸ್‌ನ ಸರ್ವಾಧಿಕಾರವನ್ನು ವಿರೋಧಿಸಲು ಎಲ್ಲಾ ಸರ್ವಾಧಿಕಾರಿ ವಿರೋಧಿ ಶಕ್ತಿಗಳ ಅತ್ಯಂತ ವಿಶಾಲ ತಳಹದಿಯ ಐಕ್ಯತೆಯನ್ನು ಸಿ.ಪಿ.ಐ.(ಎಂ) ಪ್ರತಿಪಾದಿಸುತ್ತದೆ."

●

ಕೊಲೆಗಳು ನಿಲ್ಲಲಿ

(1ನೇ ಪುಟದಿಂದ)

ಸೂರೆ ನಡೆದಿದೆ; ಹೆಣ್ಣು ಮಕ್ಕಳ ಮಾನಭಂಗ ರಾಜಾರೋಷವಾಗಿ ನಡೆದೇ ಇದೆ ಈ ಪ್ರದೇಶಗಳಲ್ಲಿ ನಡೆಯುತ್ತಿರುವ ಎಲ್ಲ ಹೋರಾಟಗಳನ್ನು ಅತ್ಯಂತ ಭಯೋತ್ಪಾದಕ ರೀತಿಯಲ್ಲಿ ಹತ್ತಿಕ್ಕಲು ಯತ್ನ ನಡೆಯುತ್ತಿದೆ. ಸಿ.ಪಿ.ಐ.(ಎಂ)ನ್ನು ಮೂಲೋಚ್ಚಾಟನೆ ಮಾಡಬೇಕೆಂಬುದೇ ಈ ಕಾರ್ಯಾಚರಣೆಯ ಉದ್ದೇಶ.

ಪಕ್ಷದ ಸಂಗಾತಿಗಳ ಕೊಲೆಗಳ ಕುರಿತು ಅನೇಕ ದೂರುಗಳನ್ನು ನೀಡಿ, ಮನವಿ ಸಲ್ಲಿಸಿದ್ದರೂ ಕೊಲೆಗಡುಕರನ್ನು ಇಂದಿನವರೆಗೂ ಬಂಧಿಸಿಲ್ಲ. ನರಭಕ್ಷಕ ಸರಕಾರವನ್ನು ಸುರಕ್ಷಿತವಾಗಿಡಲು ರಕ್ತದ ಹೊಳೆಯನ್ನೇ ಹರಿಸಲಾಗುತ್ತಿದೆ.

ತೆಲಂಗಾಣಾ ಪ್ರದೇಶದಲ್ಲಿ ನಡೆಯುತ್ತಿರುವ ಕಾಂಗ್ರೆಸ್ಸಿನ ಕೊಲೆ ರಾಜಕೀಯ ಮತ್ತು ಭಯೋತ್ಪಾದನೆಯನ್ನು ತಕ್ಷಣ ನಿಲ್ಲಿಸಬೇಕೆಂದು ನಾವು ಒತ್ತಾಯಿಸುತ್ತೇವೆ. ಈ ಹೇಯ ಕೊಲೆಗಳಿಗೆ ಕಾರಣರಾದ ಜಮೀನ್ದಾರರನ್ನು, ಅವರ ಗುಂಡಾಗಳನ್ನು, ಶಾಮೀಲಾಗಿರುವ ಪೋಲಿಸ್ ಅಧಿಕಾರಿಗಳನ್ನು ಶಿಕ್ಷಿಸಬೇಕೆಂದೂ ನಾವು ಒತ್ತಾಯಿಸುತ್ತೇವೆ.

ಮಹಾನ್ ಹೋರಾಟದ ಉನ್ನತ ಪರಂಪರೆ ಇರುವ ಇಲ್ಲಿಯ ಜನತೆಯ ಹೋರಾಟವನ್ನು ಬಗ್ಗುಬಡೆಯಲು ಯತ್ನಿಸುವುದು ಖಂಡಿತವಾಗಿ ಸಾಧ್ಯವಿಲ್ಲವೆಂದು ನಾವು ತಿಳಿಸಲಪೇಕ್ಷಿಸುತ್ತೇವೆ.

●

ಕಾಂ| ಪಂಕಜ ಆಚಾರ್ಯ

ಸಿ.ಪಿ.ಐ.(ಎಂ) ಪ. ಬಂಗಾಲ ರಾಜ್ಯ ಸಮಿತಿಯ ಸದಸ್ಯೆ, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕಾಂ| ಪಂಕಜ ಆಚಾರ್ಯ ಅವರು ಜೂನ್ 22 ರಂದು ಕಲ್ಕತ್ತದಲ್ಲಿ ನಿಧನರಾದ ದುಃಖಕರ ವಾರ್ತೆ ಬಂದಿದೆ. ಅವರಿಗೆ 58 ವರ್ಷ ವಯಸ್ಸಾಗಿತ್ತು.

ಕಾಂ| ಪಂಕಜ ಆಚಾರ್ಯ ಅವರು ಪ. ಬಂಗಾಲದ ಗಣ ತಾಂತ್ರಿಕ ಮಹಿಳಾ ಸಮಿತಿಯ ಪ್ರಧಾನ ಕಾರ್ಯದರ್ಶಿಗಳೂ, ಪ. ಬಂಗಾಲ ಸಮಾಜ ಕಲ್ಯಾಣ ಬೋರ್ಡಿನ ಅಧ್ಯಕ್ಷೆಯೂ ಆಗಿದ್ದರು.

ತನ್ನ ಅಮೂಲ್ಯ ಸಂಗಾತಿಯನ್ನು ಕಳೆದುಕೊಂಡಿದ್ದಕ್ಕೆ ತೀವ್ರ ದುಃಖ ವ್ಯಕ್ತಪಡಿಸಿರುವ ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯು ಕಾಂ| ಪಂಕಜ ಆಚಾರ್ಯ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದೆ.

ಕಲ್ಕತ್ತದಲ್ಲಿ ನಡೆದ ಅಂತಿಮ ಸಂಸ್ಕಾರದಲ್ಲಿ ಕಾಂ| ಪ್ರಮೋದ್ ದಾಸ್ ಗುಪ್ತ ಮತ್ತು ಕಾಂ| ಜ್ಯೋತಿ ಬಸು ಪಾಲ್ಗೊಂಡಿದ್ದರು.

●

ಮಂಗಳೂರು : ಮುದ್ರಣ ಕಾರ್ಮಿಕರಿಗೆ ಕನಿಷ್ಟ ವೇತನದ ಬಗ್ಗೆ ಒಪ್ಪಂದ

ಕರ್ನಾಟಕ ಸರಕಾರವು ಮುದ್ರಣ ಕಾರ್ಮಿಕರ ಕನಿಷ್ಟ ವೇತನವನ್ನು 1-3-82 ರಿಂದ ಜ್ಯಾರಿಯಾಗುವಂತೆ ಪರಿಷ್ಕರಿಸಿದ್ದು, ಈ ಬಗ್ಗೆ ಮಾಲೀಕರ ಪರವಾಗಿ ಎಸ್. ಕೆ. ಮಾಸ್ಟರ್ಸ್ ಪ್ರಿಂಟರ್ಸ್ ಅಸೋಶಿಯೇಷನ್ ಮತ್ತು ಕಾರ್ಮಿಕರ ಪರವಾಗಿ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.) ಮಂಗಳೂರು ಇವರ ಮಧ್ಯೆ ಮಾತುಕತೆ ನಡೆದು ಒಪ್ಪಂದಕ್ಕೆ ಬರಲಾಗಿದೆ.

ಈ ಒಪ್ಪಂದದ ಪ್ರಕಾರ ಎಲ್ಲಾ ಮುದ್ರಣ ಕಾರ್ಮಿಕರಿಗೆ 1-3-82 ರಿಂದ ಕನಿಷ್ಠ ವೇತನವನ್ನು ಜ್ಯಾರಿಗೆ ತರಲಾಗುವುದು. ಮತ್ತು ಈ ಪುನರ್ವಿಮರ್ಶಿತ ಕನಿಷ್ಟ ವೇತನದಿಂದ ಅನುಕೂಲವಾಗದೆ ಇರತಕ್ಕ ಕಾರ್ಮಿಕರು ಕನಿಷ್ಟ ಮಾಸಿಕ ರೂ. 25ರಂತೆ ಹೆಚ್ಚಿಗೆ ವೇತನ ಪಡೆಯುತ್ತಾರೆ.

24-6-82 ರಂದು ನಡೆದ ಈ ಒಪ್ಪಂದಕ್ಕೆ ಕಾರ್ಮಿಕರ ಪರವಾಗಿ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷ ಕಾಂ| ಪಿ. ರಾಮಚಂದ್ರರಾವ್, ಉಪಾಧ್ಯಕ್ಷರುಗಳಾದ ಕಾಂ| ಕೆ. ಮೂಸಬ್ಬ ಮತ್ತು ಕಾಂ| ಬಿ. ಉಮಾನಾಥ ಹಾಗೂ ಕಾರ್ಯದರ್ಶಿ ಕಾಂ| ಬಿ. ಭುಜಂಗಮಾರ್ಲರು ಸಹಿ ಹಾಕಿದ್ದು, ಮಾಲೀಕರ ಪರವಾಗಿ ಶ್ರೀ ಕೆ. ವಿ. ನಾಯಕ್, ಎಂ. ವಿಷ್ಣುಮೂರ್ತಿಪ್ರಭು, ಎಂ. ರಘುವೀರ ಶೆಣೈ ಮತ್ತು ಮನೋಹರ ಕಾಮತ್ ಸಹಿ ಹಾಕಿದ್ದಾರೆ.

ಹಸಿದ ಕಣ್ಗಳಿಂದ

ಯೋಗ್ಯರು ಯಾರು ?

ಹೀಗೆಂದು ನಮ್ಮ ಕನ್ನಡ ನಾಡಿನ ಮಹಾ ಶಿಕ್ಷಣ ಸಚಿವ ಜಿ. ಬಿ. ಶಂಕರರಾವ್ ಚಡ್ಡಿ ಗೆಳೆಯ ಎ. ಕೆ. ಸುಬ್ಬಯ್ಯನಿಗೆ ಪ್ರಶ್ನಿಸುತ್ತಾರೆ ! ಆದರೆ ಇದಕ್ಕೆ ಉತ್ತರ ಹೇಳುವವರು ಸುಬ್ಬಯ್ಯ ಅಲ್ಲ. ಇವರಿಬ್ಬರನ್ನು ವಿಧಾನ ಸೌಧದ ಸದನದಲ್ಲಿ ಜಗಳ ಆಡಲು ಆರಿಸಿ ಕಳಿಸಿದ ಜನ ಗುಣಗುತ್ತಾರೆ; "ಅಯೋಗ್ಯರಿಗೆ ಯೋಗ್ಯತೆಯ ಪಾಠ ಏಕೆ ? ಹಾಗಂದರೇನು ? ಈ ಮಹಾ ದೇಶ ಭಕ್ತ ನಾಯಕರಿಗೆ ಗೊತ್ತೆ ? ಮೊದಲು ಅವರು ತಮ್ಮ ತಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳಲಿ. ಆಮೇಲೆ ಯೋಗ್ಯತೆಯ ಬಗ್ಗೆ ಭಾಷಣ ಬಿಗಿಯಲಿ" ಎಂದು ಎಲ್ಲರು ಗುಣಗುವುದು ಬಹುಷಃ ಇವರ ಕಿವಿಗೆ ಬೀಳಲಾರದು.

●

ಗಂಟೆ ಬಾರಿಸುವವರು

ಕೇಳಿದ್ದಿರಾ ಹೊಸ ಸುದ್ದಿ. ನಮ್ಮ ಸರಕಾರಿ ಅಧಿಕಾರಿಗಳ ಹೊಸ ತಂತ್ರದ ವಿಷಯ. ಇಷ್ಟು ದಿನ ದುಡಿವ ರೈತರ ರಕ್ತ ಕುಡಿದ ಕಂದಾಯ ಇಲಾಖೆಯವರು ಈಗ ಮತ್ತೆ ಗುಲಬರ್ಗಾದಲ್ಲಿ ಗಂಟೆ ಬಾರಿಸುತ್ತ ಬಾಕಿ ವಸೂಲಿಗಾಗಿ ರೈತರ ಬಾಗಿಲು ಬಡೆಯುತ್ತಿದ್ದಾರಂತೆ ಇವರಿಗೇನು ಕೆಲಸ, ಬರೀ ಗಂಟೆ ಬಾರಿಸಿ ಸುದ್ದಿ ಮಾಡಿ ತಾವು ಗಂಟು ಮಾಡಿಕೊಳ್ಳುವ ಈ ಕಳ್ಳರ ಹೊಸ ಸೂತ್ರ ಎಷ್ಟು ದಿನ ಮುಚ್ಚಿಡಲು ಸಾಧ್ಯ ? ಎಂದು ಕೆಲವರ ಅಂಬೋಣ.

○

ಯಾರೀ ಜೇಲ್ ಸಿಂಗ್ ?

"ಅರೇ ! ನಿಮಗೆ ಗೊತ್ತೆ ಇಲ್ವ ? ಅಮ್ಮನ ಪಾದ ಧೂಳಿನಿಂದ ಹುಟ್ಟಿದ ಮಹಾ ದೇಶ ಭಕ್ತ !"

"ಸರಿ ಈಗೇಕೆ ಅವರ ವಿಷಯ ?"

"ಛೀ ಅವರಿಲ್ಲದಿದ್ದರೆ ಆಗುತ್ತದೆಯೇ, ಇನ್ನು ಮುಂದೆ ಭವ್ಯ ಭಾರತ ರೂಪುಗೊಳ್ಳುವುದೇ ಅವರಿಂದ !"

"ಹಾಗಾದರೆ ಈಗ ಅವರೇನು ?"

"ಇಷ್ಟು ಗೊತ್ತಿಲ್ವ ನಮ್ಮ 7ನೇ ರಬ್ಬರ್ ಸ್ಟ್ಯಾಂಪ್ ಎಂದು !"

"ಅವರ ಮಂತ್ರಿತ್ವದ ಇತಿಹಾಸವೇನು ?"

"ಅದು ಕೇಳಬೇಡ. ಅದು ಅಮ್ಮನವರಿಗೆ ಸೇರಿದ್ದು ! ?"

— ಕಲಾಲ್

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K V Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No 8/1, J. M. Lane, Balepet Cross, Bangalore-560 053. EDITOR : M. K. BHAT.